12

# ಆಲೋಚನೆಗಳು ಮತ್ತು ಕೊನೆ ನಿರ್ಣಯಗಳು

*"ಒಂದೇ ನಿರೀಕ್ಷೆಗೆ ನೀವು ಕರೆಯಲ್ಪಟ್ಟಂತೆಯೇ ದೇಹವು ಒಂದೇ, ಆತ್ಮನು ಒಬ್ಬನೇ, ಒಬ್ಬನೇ ಕರ್ತನು, ಒಂದೇ ನಂಬಿಕೆ, ಬಾಪ್ತಿಸ್ಮವೂ ಒಂದೇ ಎಲ್ಲರಿಗೂ ತಂದೆಯಾಗಿರುವ ದೇವರು ಒಬ್ಬನೇ. ಆತನು ಎಲ್ಲರ ಮೇಲೆಯೂ ಎಲ್ಲರ ಮುಖಾಂತರವೂ ಎಲ್ಲರಲ್ಲಿಯೂ ಇರುವಾತನಾಗಿದ್ದಾನೆ" (ಎಫೆಸ 4:4-6).*

ಬಾಪ್ತಿಸ್ಮದ ಅರ್ಥ ಮತ್ತು ಉದ್ದೇಶದ ತಮ್ಮ ತಿಳುವಳಿಕೆಯಲ್ಲಿ ವಿವಿಧ ಗುಂಪುಗಳು ಹಾಗೂ ವೈಯಕ್ತಿಕ ವ್ಯಕ್ತಿಗಳು ಭಿನ್ನತೆ ಹೊಂದಿರುವರು. ಈ ತಿಳುವಳಿಕೆಯಲ್ಲಿ ಕೆಲವು, ಬಾಪ್ತಿಸ್ಮವನ್ನು ಕರ್ತನಾದ ಯೇಸುವಿನ ರಕ್ತದಲ್ಲಿ ರಕ್ಷಿಸುವ ಶಕ್ತಿಯಲ್ಲಿ ವಿಶ್ವಾಸದ ಅರ್ಥಗರ್ಭಿತವಾದ ಮತ್ತು ಉದ್ದೇಶ ಪೂರ್ವಕ ಕಾರ್ಯವನ್ನಾಗಿ ಮಾಡುವ ಬದಲು ಬರಿದಾದ ಆಚರಣೆಯಾಗಿ ಮಾಡುತ್ತವೆ.

ಬಾಪ್ತಿಸ್ಮವನ್ನು ಅರ್ಥಮಾಡಿಕೊಳ್ಳಲು ದೇವರ ಆಜ್ಞೆಗಳಿಗೆ ಮತ್ತು ವಾಗ್ದಾನಗಳಿಗೆ ("ಹಳೇ ಒಡಂಬಡಿಕೆಯಲ್ಲಿ ಧರ್ಮಾಚರಣೆ ಹಾಗೂ ತಿಳುವಳಿಕೆ" ನೋಡಿರಿ) ಐದು ಸೂತ್ರಗಳ ಕಾರ್ಯಾಚರಣೆಯ ಉತ್ತರಗಳನ್ನು ಮತ್ತು ಉದ್ದೇಶ ಹಾಗೂ ಕಾರ್ಯದ ಚರ್ಚೆಯನ್ನು ("ಹೊಸ ಒಡಂಬಡಿಕೆಯಲ್ಲಿ ಧರ್ಮಾಚರಣೆ ಹಾಗೂ ತಿಳುವಳಿಕೆ" ನೋಡಿರಿ) ಪುನರಾವಲೋಕನ ಮಾಡಿ ಕೊಳ್ಳಬೇಕು. ಕೆಲವು ಕಾರ್ಯಗಳಿಗೆ ಪೂರೈಸಲು ಇಲ್ಲವೇ ಉತ್ಪಾದಿಸಲು ಶಕ್ತಿಯಿರುವುದು, ಇತರ ಕಾರ್ಯಗಳಿಗೆ ಯಾವುದನ್ನೂ ಸಾಧಿಸಲು ತಮ್ಮಲ್ಲಿ ಶಕ್ತಿಯಿರುವದಿಲ್ಲ. ಒಬ್ಬನು ತಾನು ಮಾಡುತ್ತಿರುವುದು ವಾಗ್ದತ್ತ ಆಶೀರ್ವಾದವನ್ನು ತರುವದಿಲ್ಲವೆಂದು ತಿಳಿದು ಕೊಳ್ಳುವಾಗ, ಆ ಆಶೀರ್ವಾದವನ್ನು ಒದಗಿಸಲು ಇನ್ನೊಂದರಲ್ಲಿ ವಿಶ್ವಾಸವಿಡತಕ್ಕದ್ದು. ಆದುದರಿಂದ ವಾಗ್ದಾನ ಮಾಡಿದವನು ತಾನು ವಾಗ್ದಾನ ಮಾಡಿದ್ದನ್ನು ಮಾಡುವನೆಂಬ ನಂಬಿಕೆಯಿಂದ ಅದನ್ನು ಸ್ವೀಕರಿಸುವ ಉದ್ದೇಶದಿಂದ ಕಾರ್ಯ ಮಾಡತಕ್ಕದ್ದು.

ಒಬ್ಬನ ಸ್ವಂತ ಕಾರ್ಯಗಳಿಂದ ಸಾಧಿಸಿದ ಪರಿಣಾಮಗಳ ಮತ್ತು ಬೇರೊಬ್ಬನ ಕಾರ್ಯದಲ್ಲಿ ನಂಬಿಕೆಯ ನಿಮಿತ್ತವಾಗಿ ಸ್ವೀಕರಿಸಿದ ಲಾಭಗಳ ಮಧ್ಯದಲ್ಲಿ ವ್ಯತ್ಯಾಸವು ಇರುತ್ತದೆ. ಇದಕ್ಕೆ ಒಳ್ಳೆಯ ಉದಾಹರಣೆಯು ಯೆರಿಕೋವಿನ ಗೋಡೆಗಳು ಬಿದ್ದು ಹೋದದ್ದು (ಯೆಹೋಶುವ 6). ಯೆಹೋಶುವ ಮತ್ತು ಇಸ್ರಯೇಲ ಜನಾಂಗದ ಕಾರ್ಯಗಳ ನಿಮಿತ್ತ ಗೋಡೆಗಳು ಬಿದ್ದು ಹೋಗಲಿಲ್ಲ. ಗೋಡೆಗಳನ್ನು ಕೆಡವಿಹಾಕುವನೆಂದು ದೇವರಲ್ಲಿಯ ಅವರ ನಂಬಿಕೆಯ ನಿಮಿತ್ತ ದೇವರು ಗೋಡೆಗಳನ್ನು ಕೆಡವಿಹಾಕಿದನು. ಅವರು ತಾವೇನು ಮಾಡಬೇಕೆಂದು ಆಜ್ಞಾಪಿಸಲ್ಪಟ್ಟದ್ದು ಗೋಡೆಗಳನ್ನು ಕೆಡವಿ ಹಾಕುವದಿಲ್ಲ ಎಂದು ಅವರು ತಿಳಿದಿದ್ದರು. ದೇವರು ತಾನು ಮಾಡುವೆನೆಂದು ಹೇಳಿದ್ದರಲ್ಲಿಯ ನಂಬಿಕೆಯ ಕಾರಣದಿಂದ

ಇಸ್ರಾಯೇಲ್ಯರು ಕಾರ್ಯಮಾಡಿದರು. ತಮ್ಮ ಸ್ವಂತ ಕಾರ್ಯಗಳ ಶಕ್ತಿಯಲ್ಲಿಯ ವಿಶ್ವಾಸದ ಕಾರಣದಿಂದ ಅಲ್ಲ. ದೇವರು ಗೋಡೆಗಳನ್ನು ಕೆಡವಿ ಹಾಕುವನೆಂಬದರಲ್ಲಿ ವಿಶ್ವಾಸವಿಲ್ಲದೆ ಅವರು ಗೋಡೆಗಳ ಸುತ್ತ ತಿರುಗಿದ್ದರೆ, ದೇವರು ಗೋಡೆಗಳು ಬೀಳು ವಂತೆ ಮಾಡುತ್ತಿರಲಿಲ್ಲ. ಸರಿಯಾಗಿ ಅವರು ಕಾರ್ಯಮಾಡದೆ ಇದ್ದುದಕ್ಕಾಗಿ ಅಲ್ಲ ಆದರೆ ವಿಶ್ವಾಸದ ಕೊರತೆಯ ನಿಮಿತ್ತವಾಗಿ, ದೇವರು ಏನು ಮಾಡುವನು ಎಂಬುದನ್ನು ತಿಳಿದು ಕೊಳ್ಳದೆ ಕಾರ್ಯ ಮಾಡಿದರೆ, ಅವರ ಕಾರ್ಯವು ಕುರುಡ ವಿಧೇಯತೆಯ ಮೇಲೆ ಅವಲಂಭಿಸಿರುತ್ತಿತ್ತು ಆದರೆ ಕಾರ್ಯಮಾಡುವ ದೇವರಲ್ಲಿಯ ವಿಶ್ವಾಸದ ಮೇಲೆ ಅಲ್ಲ.

## ಬಾಪ್ತಿಸ್ಮ, ಕಾರ್ಯಮಾಡಲು ದೇವರಲ್ಲಿ ನಂಬಿಕೆ

ಒಬ್ಬನು ನಂಬುವನೋ ಅಥವಾ ಅರ್ಥ ಮಾಡಿಕೊಳ್ಳುವನೋ ಎಂಬ ವ್ಯತ್ಯಾಸ ವಿಲ್ಲದೇ ಶಾರೀರಿಕ ಕೊಳೆಯನ್ನು ಸೋಪು ಮತ್ತು ನೀರು ತೆಗೆದು ಹಾಕುವಂತ ಸ್ನಾನ ಮಾಡುವಂತೆ ಬಾಪ್ತಿಸ್ಮವು ಇರುವದಿಲ್ಲ. ಪಾಪಗಳನ್ನು ತೊಳೆಯಲು ಬಾಪ್ತಿಸ್ಮಕ್ಕೆ ಸ್ವಾಭಾವಿಕ ವಾದ ಶಕ್ತಿಯಿರುವದಿಲ್ಲ; ಯೇಸುವಿನ ರಕ್ತವು ಮಾತ್ರವೇ ಅದನ್ನು ಮಾಡಬಲ್ಲದು. ಒಬ್ಬ ಮನುಷ್ಯನ ಕಾರ್ಯದ ಶಕ್ತಿಯ ಕಾರಣದಿಂದ ದೇವರ ಬಹುಮಾನವು ಬರುವದಿಲ್ಲ. ಆದರೆ ಮನುಷ್ಯನನ್ನು ಕಾರ್ಯಮಾಡುವದಕ್ಕೆ ಕಾರಣವಾದ ನಂಬಿಕೆಗೆ ದೇವರು ಬಹುಮಾನ ವನ್ನು ಕೊಡುವನು. ತಾವು ಮಾಡುತ್ತಿರುವುದು ಗೋಡೆಗಳನ್ನು ಕೆಡವಿ ಹಾಕುವದಿಲ್ಲ ಎಂದು ಅರಿತು ಕೊಂಡು ಯೆಹೋಶುವ ಮತ್ತು ಇಸ್ರಾಯೇಲ್ಯರು ನಂಬಿಕೆಯಿಂದ ಕಾರ್ಯ ಮಾಡಿದಂತೆ, ಬಾಪ್ತಿಸ್ಮ ಹೊಂದಿದವರು ನಂಬಿಕೆಯಿಂದ ಕಾರ್ಯಮಾಡುತ್ತಿರುವರು. ತಾವು ಮಾಡುತ್ತಿರುವಂತದ್ದು ತಮ್ಮ ಪಾಪಗಳನ್ನು ತೆಗೆದು ಹಾಕಲು ಶಕ್ತಿಯಿಲ್ಲದ್ದಾಗಿದೆ ಎಂಬುದನ್ನು ಅರಿತು ಕೊಂಡಿರುವರು.

ಯೇಸುವಿನ ರಕ್ತದಲ್ಲಿ ನಂಬಿಕೆ ಯಿರುವವರಿಗೆ ರಕ್ಷಣೆಯು ಕೊಡಲ್ಪಟ್ಟಿದೆ (ರೋಮಾಪುರ 3:23-25). ಪಾಪಗಳನ್ನು ಕ್ಷಮಿಸುವದಕ್ಕೆ ಯೇಸುವಿನ ರಕ್ತದಲ್ಲಿ ನಂಬಿಕೆಯ ಮೇಲೆ ಅವಲಂಭಿಸಿದ ಬಾಪ್ತಿಸ್ಮವು ಶಿಲುಬೆಯ ಮೇಲಿನ ಆತನ ಮರಣಕ್ಕೆ ಸಂಪೂರ್ಣವಾಗಿ ಸಂಬಂಧಿಸದೇ ಇರುವುದು ಮತ್ತು ಆತನ ರಕ್ತದಲ್ಲಿಯ ವಿಶ್ವಾಸದ ಕೃತ್ಯವಾಗಿರುವುದೇ ಇಲ್ಲ. ಒಬ್ಬನು ತನ್ನನ್ನು ಶುದ್ಧೀಕರಿಸಲು ಯೇಸುವಿನ ರಕ್ತದಲ್ಲಿ ನಂಬಿಕೆಯಿಲ್ಲದೆ ಬಾಪ್ತಿಸ್ಮದ ಮುಖಾಂತರ ರಕ್ಷಿಸಲ್ಪಡ ಬಹುದಾದರೆ, ದೇವರಿಗೆ ವಿಧೇಯ ನಾಗಲು ಅವನ ಬಾಪ್ತಿಸ್ಮವು ಇದ್ದರೂ ಅವನು ಯೇಸುವಿನ ರಕ್ತದಲ್ಲಿ ನಂಬಿಕೆಯಿಲ್ಲದೇ ರಕ್ಷಿಸಲ್ಪಡಬಹುದು.

ಒಬ್ಬನು ಬಾಪ್ತಿಸ್ಮ ಹೊಂದುವಾಗ ಇದನ್ನು ಅರ್ಥ ಮಾಡಿಕೊಳ್ಳದಿದ್ದರೂ ಒಬ್ಬನು ಪಾಪಗಳ ಕ್ಷಮಾಪಣೆಯನ್ನು ಸ್ವೀಕರಿಸಬಹುದು ಎಂದು ರುಜುವಾತು ಪಡಿಸಲು ಯಾರೋ ಕೊಟ್ಟ ಉದಾಹರಣೆಗಳಿಗೆ Cecil May, Jr., ಉತ್ತರ ಬರೆದಿದ್ದಾನೆ:

> ರೋಗಿಗಳು ಸರಿಯಾದ ಔಷಧಿ ತೆಗೆದು ಕೊಂಡರೆ, ಔಷಧಿಯು ಅವರನ್ನು ಗುಣಪಡಿಸುವುದು ಅದರ ಉದ್ದೇಶವೆಂದು ಅವರು ತಿಳಿದಿರಲಿ, ತಿಳಿಯದೇ ಇದ್ದರು ಅದು ಅವರನ್ನು ಗುಣಪಡಿಸುವುದು. ಅವರು ಆಗಲೇ ಗುಣಹೊಂದಿದ್ದೇವೆಂದು ತಪ್ಪಾಗಿ ತಿಳಿದು ಕೊಂಡರೂ ತಮ್ಮ ವೈದ್ಯನಿಗೆ ಇಲ್ಲವೇ ತಂದೆ ತಾಯಿಗಳಿಗೆ ವಿಧೇಯ ರಾಗಲು ಔಷಧಿ ತೆಗೆದುಕೊಂಡರೂ ಔಷಧಿಯು ಇನ್ನೂ ಕಾರ್ಯ ಮಾಡುವುದು.[1]

ಇನ್ನೊಂದು ಉದಾಹರಣೆಯನ್ನು ಕೊಟ್ಟನಂತರ ಅವನು ಹೀಗೆ ಬರೆದನು,

> ಹೀಗಿದ್ದರೂ ಈ ಉದಾಹರಣೆಗಳು ಕಾರ್ಯ ಹಾಗೂ ವಾಗ್ದಾನದ ಮಧ್ಯದಲ್ಲಿಯ ಸಂಬಂಧದ ವಿಷಯದಲ್ಲಿ ಮುರಿದು ಬೀಳುತ್ತವೆ. ಔಷಧಿಯು ನಿಜವಾಗಿಯೂ ಗುಣಪಡಿಸುವಿಕೆಗೆ ಸಂಬಂಧಿಸಿದೆ ... ರಕ್ಷಣೆಯು ಕೃಪೆಯಿಂದಲೇ ಎಂಬುದು ಸ್ಪಷ್ಟವಾಗಿರುವದರಿಂದ, ಬಾಪ್ತಿಸ್ಮ ಹೊಂದುವದರಿಂದ ಸಂಪಾದಿ ಸಲ್ಪಡದೇ ಇರುವದರಿಂದ ಹಾಗೂ ನಂಬಿಕೆಯಿಂದ ಇರುವದರಿಂದ, ನೀರಿನಲ್ಲಾಗಲೀ ಇಲ್ಲವೇ ಕಾರ್ಯದಲ್ಲಾಗಲೀ ನಿಜವಾದ ಬೆಲೆಯಿಂದ ಸಾಧಿಸಲ್ಪಡದೇ ಇರುವದರಿಂದ, ಬಾಪ್ತಿಸ್ಮದ ಬಗೆಗೂ ರಕ್ಷಣೆಗೆ ಅದರ ಸಂಬಂಧದ ಬಗ್ಗೆಗೂ ತಿಳಿದುಕೊಳ್ಳಲ್ಪಟ್ಟದ್ದು ಒಬ್ಬನಿಗೆ ರಕ್ಷಿಸುವ ನಂಬಿಕೆಯಿದೆಯೇ ಎಂಬುದು ಸಮಂಜಸವಾದದ್ದಾಗಿದೆ.
>
> ರಕ್ಷಣೆಗಾಗಿ ನಮ್ಮ ಅಗತ್ಯತೆಯನ್ನು ನೋಡುವೆವು. ಕ್ರಿಸ್ತನು ಒದಗಿಸುವ ನೀತಿ ನಿರ್ಣಯಕ್ಕಾಗಿ ಆತನನ್ನು ನಂಬುವೆವು, ಹಾಗೂ "ನಂಬುವವನು ಮತ್ತು ಬಾಪ್ತಿಸ್ಮ ಹೊಂದುವವನು ರಕ್ಷಿಸಲ್ಪಡುವನು" ಎಂದು ಆತನು ಹೇಳಿದ್ದರಿಂದ ಬಾಪ್ತಿಸ್ಮ ಹೊಂದುವನು. ಆದರೆ ವಾಗ್ದಾನದಿಂದ ಬಾಪ್ತಿಸ್ಮವನ್ನೂ ರಕ್ಷಣೆಯನ್ನೂ ಒದಗಿಸಿದವನು ಕ್ರಿಸ್ತನೆಂದು ನಾವು ನಂಬಿದ್ದನ್ನು ಬಿಟ್ಟು ಅವುಗಳಲ್ಲಿ ಯಾವ ಸಂಬಂಧವಿರದೇ ಇರುವಾಗ, ರಕ್ಷಿಸಲ್ಪಡಲು ಬಾಪ್ತಿಸ್ಮ ಹೊಂದುವದರಲ್ಲಿ ನಂಬಿಕೆಯ ಮುಖಾಂತರ ಕೃಪೆಯಿಂದ ನಾವು ರಕ್ಷಿಸಲ್ಪಡುತ್ತೇವೆ.[2]

ಬಾಪ್ತಿಸ್ಮವು ತಾನೇ ಪಾಪವನ್ನು ತೆಗೆದು ಹಾಕಿದ್ದರೆ, ಆಗ ಬಾಪ್ತಿಸ್ಮ ಹೊಂದುವವನ ಭಾಗವಾಗಿ ನಂಬಿಕೆಯಿಲ್ಲದೇ ತಿಳುವಳಿಕೆಯಿಲ್ಲದೇ ಪಾಪವು ತೆಗೆದು ಹಾಕಲ್ಪಡುವುದು. ಬಾಪ್ತಿಸ್ಮದ ಕಾರ್ಯವು ಪಾಪಗಳನ್ನು ತನ್ನ ರಕ್ತವನ್ನು ಸುರಿಸಿದಾತನಾದ ಯೇಸುವಿನಲ್ಲಿ ನಂಬಿಕೆಯು ಪಾಪಗಳನ್ನು ತೆಗೆದು ಹಾಕುವದಕ್ಕಾಗಿ ಅವಶ್ಯವಾಗಿ ಬೇಕಾಗುತ್ತದೆ. ಇದು ಸತ್ಯವಾಗಿರದಿದ್ದರೆ, ಆಗ ಪಾಪಗಳ ಕ್ಷಮಾಪಣೆಯು ಯೇಸುವಿನ ರಕ್ತದಲ್ಲಿಯ ನಂಬಿಕೆಯ ಮುಖಾಂತರವಾಗಿ ಇರುವದಿಲ್ಲ. ಆದರೆ ದೇವರಿಗೆ ವಿಧೇಯತೆಯ ಆಚಾರದ ಕಾರ್ಯದ ಮೇಲೆ ಅವಲಂಭಿಸಿದ, ಯೇಸುವಿನ ರಕ್ತದ ಶುದ್ಧೀಕರಿಸುವ ಶಕ್ತಿಯಲ್ಲಿ ನಂಬಿಕೆಯಿಲ್ಲದ ಕಾರ್ಯವಾಗಿರುವುದು. ಅಂಥಾ ವಿಧಾನವು ಮನುಷ್ಯನ ಪಾಪಭರಿತ ಪರಿಸ್ಥಿತಿಗೂ ಯೇಸುವಿನ ರಕ್ತದ ಶಕ್ತಿಗೂ ಬಾಪ್ತಿಸ್ಮವನ್ನು ಸರಿಯಾಗಿ ಸಂಬಂಧವಿಲ್ಲದ್ದನ್ನಾಗಿ ಮಾಡುವುದು.

ಬಾಪ್ತಿಸ್ಮಕ್ಕೆ ಅಲ್ಲ, ಆದರೆ ಯೇಸುವಿನ ರಕ್ತಕ್ಕೆ ಪಾಪವನ್ನು ತೆಗೆದು ಹಾಕುವ ಬಲವಿದ್ದುದರಿಂದ, ಆತನ ರಕ್ತದಲ್ಲ ವಿಶ್ವಾಸವನ್ನು ಇಡುವದರಿಂದ ಮಾತ್ರವೇ ಬಾಪ್ತಿಸ್ಮದ ಫಲವು ಸ್ವೀಕರಿಸಲ್ಪಟ್ಟಿರುವುದು. ಒಬ್ಬನು ಬಾಪ್ತಿಸ್ಮ ಹೊಂದಿದ್ದು ಸುಮ್ಮನೆ ಕ್ಷಮಾಪಣೆಯಾದರೆ, ಯೇಸುವಿನ ರಕ್ತದಲ್ಲಿ ನಂಬಿಕೆಯ ಬದಲು ಬಾಪ್ತಿಸ್ಮವನ್ನು ಕ್ಷಮಾಪಣೆಯನ್ನಾಗಿ ಮಾಡುತ್ತದೆ. ಯೇಸುವಿನ ರಕ್ತದ ರಕ್ಷಿಸುವ ಶಕ್ತಿಯಲ್ಲಿ ನಂಬಿಕೆಯಿಲ್ಲದ ಕಾರ್ಯದಿಂದ ರಕ್ಷಣೆ ಎಂಬುದು ಹೊಸ ಒಡಂಬಡಿಕೆಯ ಬೋಧನೆಗಿಂತ ಹೆಚ್ಚು ವಿರೋಧ ವಾದದ್ದು ಯಾವುದೂ ಇರುವುದಿಲ್ಲ (ಎಫೆಸ 2:8; ರೋಮಾಪುರ 3:25).

ಮೇಲಿನ ತೀರ್ಮಾನಗಳಿಗಿಂತ ಕೆಲವು ದೃಷ್ಟಿ ಕೋನಗಳು ಭಿನ್ನವಾಗಿರುತ್ತವೆ:

> ... ಯಾರ ಉದ್ದೇಶವನ್ನು ಆತನು ನೆರವೇರಿಸುವನೋ, ಆ ಜನರಿಗೆ ಒಂದು ಆಜ್ಞೆಗೆ ವಿಧೇಯರಾಗ ಬೇಕೆಂದು ಕರ್ತನು ಆಜ್ಞಾಪಿಸುವಾಗ, ಅವರು ಮೊದಲನೆಯದನ್ನು ಮಾಡಬೇಕು ಆದರೆ ಅನಂತರದ್ದನ್ನಲ್ಲ. ಹೇಗಾದರೂ ಅವರು ಅನಂತರದ್ದನ್ನು ಮಾಡಲಾರರು. ಬಾಪ್ತಿಸ್ಮದೊಂದಿಗೆ ಸಂಬಂಧಿಸಿದ "ಪಾಪಗಳ ಪರಿಹಾರವು" (ಅಪೊಸ್ತಲರ ಕೃತ್ಯ 2:38) ಜನರು ಬಾಪ್ತಿಸ್ಮ ಹೊಂದಿದಾಗ

> ದೇವರು ನೆರವೇರಿಸುವ ಉದ್ದೇಶವಾಗಿದೆ. "ಪರಿಶುದ್ಧಾತ್ಮ ಎಂಬ ವರವು" ಒಂದು ವಾಗ್ದಾನವೆಂದು ಹೇಳಲ್ಪಟ್ಟಿರುವಂತೆ, ಅದು ಕ್ಷಮಾಪಣೆಯೊಂದಿಗೆ ಅದೇ ವಿಧಾನದಲ್ಲಿ ಹೊಂದಿಕೊಳ್ಳುವಂತದ್ದು. ಯಾಕಂದರೆ ಅವೆರಡೂ ಮಾನಸಾಂತರ ಪಡುವವರಿಗೆ ಹಾಗೂ ಬಾಪ್ತಿಸ್ಮ ಹೊಂದಿಕೊಳ್ಳುವವರಿಗೆ ಕೊಡಲ್ಪಡುವ ಆಶೀರ್ವಾದ ಗಳಾಗಿವೆ. "ಪಾಪಗಳ ಕ್ಷಮಾಪಣೆಯಾಗಲೀ" ಇಲ್ಲವೇ "ಪರಿಶುದ್ಧಾತ್ಮ ಎಂಬ ವರವು" ಬಾಪ್ತಿಸ್ಮದ ಆಜ್ಞೆಯ ಭಾಗವಾಗಿರುವದಿಲ್ಲ. ಅವೆರಡೂ ಆಜ್ಞೆಗೆ ವಿಧೇಯರಾಗುವದರ ಪರಿಣಾಮಗಳಾಗಿವೆ. ಬಾಪ್ತಿಸ್ಮದ ಸಮಯದಲ್ಲಿ ದೇವರು ಕ್ಷಮಾಪಣೆಯನ್ನೂ ಪರಿಶುದ್ಧಾತ್ಮ ಎಂಬ ವರವನ್ನೂ ಕೊಡುವನೆಂದು ತಿಳಿದುಕೊಳ್ಳಬೇಕು. ಇಲ್ಲವೇ ಅವೆರಡರಲ್ಲಿ ಒಂದನ್ನು ಇಲ್ಲವೇ ಎರಡೂ ಲಾಭಗಳನ್ನು ಅಲ್ಲಗಳೆಯುವನೆಂದು ಜನರು ತಿಳಿಯತಕ್ಕದ್ದೆಂದು ಕರ್ತನು ಹೇಳಿರುವ ಸ್ಪಷ್ಟ ಹೇಳಿಕೆಯನ್ನು ಎಂದೂ ಕಂಡುಕೊಳ್ಳುವದಿಲ್ಲ.[3]

ದೇವರು ಪಾಪಗಳನ್ನು ಕ್ಷಮಿಸುವಾತನು ಎಂಬುದನ್ನು ಯಾರೂ ಅಲ್ಲಗಳೆಯುವದಿಲ್ಲ. ಇನ್ನೊಬ್ಬನಿಂದ ವಾಗ್ದಾನ ಮಾಡಿದ್ದನ್ನು ಸ್ವೀಕರಿಸುವ ಉದ್ದೇಶದಿಂದ ಒಬ್ಬನು ಉತ್ತರ ಕೊಡಲು ಬಯಸಬಹುದು. ದೇವರು ಯೆರಿಕೋವಿನ ಗೋಡೆಗಳನ್ನು ಕೆಡವಿ ಹಾಕುವೆನೆಂದು ಇಸ್ರಾಯೇಲ್ಯರಿಗೆ ನಂಬಿಕೆಯಿತ್ತು. ಆದುದರಿಂದ ಅವರು ಆತನು ವಾಗ್ದಾನ ಮಾಡಿದ್ದನ್ನು ಸ್ವೀಕರಿಸುವದಕ್ಕಾಗಿ ಅವರು ಉತ್ತರ ಕೊಟ್ಟರು.

"ಎರಡೂನೂರು ರೂಪಾಯಿಗಳಿಗಾಗಿ ನಿನ್ನ ಕೈಚಾಚು" ಎಂದು ಹೇಳುವದಕ್ಕೂ, ಯಾವುದೇ ಉದ್ದೇಶ ಹೇಳದೇ, ಇಲ್ಲವೇ ಅಂಥ ಅಪ್ಪಣೆಗೆ ಸಂಬಂಧಿಸಿ ಆಶೀರ್ವಾದ ವಿಲ್ಲದೇ "ನಿನ್ನ ಕೈಚಾಚು" ಎಂದು ಹೇಳುವದಕ್ಕೂ ಭಿನ್ನತೆಯಿದೆ. ಮೊದಲನೆಯ ಹೇಳಿ ಕೆಗೆ ವಾಗ್ದಾನದಲ್ಲಿಯ ನಂಬಿಕೆಯು ಹಾಗೂ ಒಂದು ಆಜ್ಞೆಗೆ ವಿಧೇಯತೆಯಲ್ಲಿ ಉದ್ದೇಶ ದೊಂದಿಗೆ ಕಾರ್ಯವು ಅಗತ್ಯವಾಗಿದೆ. ಅನಂತರದ್ದಕ್ಕೆ ವಿಶ್ವಾಸವಾಗಲೀ ಇಲ್ಲವೇ ಕುರುಡು ವಿಧೇಯತೆಯ ಹೊರಗೆ ಉದ್ದೇಶವಾಗಲೀ ಅಗತ್ಯವಾಗಿರುವದಿಲ್ಲ.

ಮೊದಲನೆಯ ಹೇಳಿಕೆಯ ಪ್ರಕಾರವಾಗಿ ಕೃಚಾಚುವುದು, ಅವನು ಇನ್ನೂರು ರೂಪಾಯಿಗಳಿಗಾಗಿ ತನ್ನ ಕೈಚಾಚದಿದ್ದರೆ ಇನ್ನೂರು ರೂಪಾಯಿ ಸ್ವೀಕರಿಸಲು ಅವನು ಅರ್ಹನಾಗುವುದಿಲ್ಲ. ಅವನು ಕೈಕುಲುಕುವುದಕ್ಕಾಗಿಯೇ ಇಲ್ಲವೇ ಬೇರೆ ಯಾವುದೋ ಕಾರಣಕ್ಕಾಗಿಯೇ ಕೈಚಾಚಿರಬಹುದು. ಆದರೆ ಈ ಕಾರ್ಯವು ಇನ್ನೂರು ರೂಪಾಯಿಗಳಿಗೆ ಅರ್ಹನನ್ನಾಗಿ ಮಾಡಲಿಲ್ಲ. ಕೈಚಾಚಿದ ವ್ಯಕ್ತಿಯ ಮನಸ್ಸನ್ನು ಒಬ್ಬನು ತಿಳಿಯುವಾಗ, ಅವನು ಇನ್ನೂರು ರೂಪಾಯಿಗಳಿಗಾಗಿ ಕೈಚಾಚಿರುವನೋ ಇಲ್ಲವೋ ಎಂಬುದನ್ನು ತಿಳಿಯುವನು. ಎರಡನೆಯ ಹೇಳಿಕೆಯನ್ನು ಯೋಚಿಸಿರಿ. ಅದು ಕೊಡಲ್ಪಡುವ ವಾಗ್ದಾನ ಮಾಡಿದ್ದನ್ನು ಒಬ್ಬನು ತಿಳಿಯದಿದ್ದರೆ ಇಲ್ಲವೇ ಅರ್ಥಮಾಡಿಕೊಳ್ಳದಿದ್ದರೆ ತನಗೆ ಒಬ್ಬನು ಇನ್ನೂರು ರೂಪಾಯಿ ಕೊಡುವನೆಂದು ಇಲ್ಲವೇ ತಾನು ಇನ್ನೂರು ರೂಪಾಯಿಗಳಿಗಾಗಿ ಕೈಚಾಚಬೇಕೆಂಬುದರಲ್ಲಿ ನಂಬಿಕೆಯಿಡುವುದು ಹೇಗೆ?

ಹಳೇ ಒಡಂಬಡಿಕೆಯ ಅಧೀನತೆಯಲ್ಲಿ ಕೃತಜ್ಞತೆಯ ಸಮರ್ಪಣೆಗಾಗಿ, ಸಮಾಧಾನ ಯಜ್ಞಕ್ಕಾಗಿ ಇಲ್ಲವೇ ಪಾಪನಿವಾರಣೆ ಯಜ್ಞಕ್ಕಾಗಿ ಪ್ರಾಣಿಗಳನ್ನು ಬಲಿ ಅರ್ಪಿಸಬಹುದಿತ್ತು (ಯಾಜಕಕಾಂಡ 4:27, 28). ಪ್ರತಿಯೊಂದು ಯಜ್ಞವು ಒಂದು ಉದ್ದೇಶಕ್ಕಾಗಿ ತರಲ್ಪಡಬೇಕಾಗಿತ್ತು. ಉದಾಹರಣೆಯಾಗಿ ಒಬ್ಬನು "ತಾನು ಮಾಡಿದ ತನ್ನ ಪಾಪಕ್ಕಾಗಿ" ಪಾಪಪರಿಹಾರದ ಅರ್ಪಣೆ ತರಬೇಕಾಗಿತ್ತು. ವಿವಿಧ ಯಜ್ಞಗಳ ಪ್ರಾಣಿಗಳು ಒಂದೇ ರೀತಿಯವುಗಳಾಗಿರಬಹುದಿತ್ತು. ಆದರೆ ಪ್ರತಿಯೊಂದು ಯಜ್ಞವು ವಿಶಿಷ್ಟ ಉದ್ದೇಶಕ್ಕಾಗಿ ಮಾಡಲ್ಪಡಬೇಕಾಗಿತ್ತು.

ಇಸ್ರಾಯೇಲ್ಯರಲ್ಲಿ ಒಬ್ಬನು ಒಂದು ಮೇಕೆ ಮರಿಯನ್ನು ಯಾಜಕರ ಬಳಿಗೆ ತೆಗೆದು ಕೊಂಡು ಬಂದು ತಾನು ಯಜ್ಞವಾಗಿ ಅರ್ಪಿಸಲು ಬಯಸಿದ್ದೇನೆಂದು ಹೇಳುವನೆಂದು ಕಲ್ಪಿಸಿರಿ. ಯಾಜಕನು ಅವನಿಗೆ "ನೀನು ಯಾಕೆ ಯಜ್ಞವನ್ನು ತೆಗೆದು ಕೊಂಡು ಬಂದಿರುವಿ?" ಎಂದು ಕೇಳುವನು.

ಆ ಮನುಷ್ಯನು, "ಯಾಕಂದರೆ ದೇವರು ಯಜ್ಞ ಅರ್ಪಿಸಲು ಹೇಳಿದ್ದಾನೆ" ಎಂದು ಉತ್ತರ ಕೊಡುವನು.

ಯಾಜಕರು, "ಯಜ್ಞಗಳಿಗೆ ವಿವಿಧ ಉದ್ದೇಶಗಳಿವೆ. ನಿನ್ನ ಉದ್ದೇಶ ಯಾವುದು?" ಎಂದು ಉತ್ತರ ಕೊಡುವನು.

"ದೇವರು ಯಜ್ಞವನ್ನು ಆಜ್ಞಾಪಿಸಿದ್ದಾನೆ" ಎಂದು ಅವನು ಪ್ರತ್ಯುತ್ತರ ಹೇಳುವನು.

"ಅದು ಸಾಲದು, ನಿನ್ನ ಯಜ್ಞಕ್ಕಾಗಿ ಉದ್ದೇಶವಿರಬೇಕು" ಎಂದು ಯಾಜಕನು ಅವನಿಗೆ ತಿಳಿಸುವನು.

"ನಾನು ಯಜ್ಞವನ್ನು ಯಾಕೆ ಅರ್ಪಿಸಬೇಕೆಂಬುದನ್ನು ನಾನು ತಿಳಿದು ಕೊಂಡಿರುವುದಿಲ್ಲ. ದೇವರು ಯಜ್ಞವನ್ನು ಆಜ್ಞಾಪಿಸಿದ್ದಾನೆ ಎಂಬುದನ್ನು ಮಾತ್ರ ನಾನು ಬಲ್ಲೆನು" ಎಂದು ಅವನು ಹೇಳಿದನು.

"ಈ ಯಜ್ಞವು ನಿನ್ನ ಪಾಪಕ್ಕಾಗಿರುವುದೋ?" ಎಂದು ಯಾಜಕರು ಪ್ರಶ್ನಿಸಬಹುದು.

"ಪಾಪಗಳನ್ನು ಕ್ಷಮಿಸುವುದು ದೇವರ ಭಾಗ, ಪಾಪಗಳ ಕ್ಷಮಾಪಣೆಗೆ ನಾನು ವಿಧೇಯನಾಗಲಾರೆನು. ನಾನು ದೇವರಿಗೆ ಮಾತ್ರ ವಿಧೇಯನಾಗುತ್ತೇನೆ" ಎಂದು ಅವನು ಉತ್ತರ ಕೊಡುವನು.

"ನಿನ್ನ ಯಜ್ಞಕ್ಕೆ ಉದ್ದೇಶವಿಲ್ಲದಿದ್ದರೆ ನೀನು ದೇವರಿಗೇ ವಿಧೇಯನಾಗಲಾರಿ. ದೇವರು ಯಜ್ಞವನ್ನು ಹಾಗೆಯೇ ಆಜ್ಞಾಪಿಸಲಿಲ್ಲ, ವಿಶಿಷ್ಠ ಉದ್ದೇಶಗಳಿಗಾಗಿ ದೇವರು ಯಜ್ಞಗಳನ್ನು ಆಜ್ಞಾಪಿಸಿದ್ದಾನೆ" ಎಂದು ಯಾಜಕನು ಅವನಿಗೆ ತಿಳಿಸಿದನು.

"ನನ್ನ ಪಾಪಗಳು ಆಗಲೇ ಕ್ಷಮಿಸಲ್ಪಟ್ಟಿವೆ. ದೇವರಿಗೆ ವಿಧೇಯನಾಗಲು ಯಜ್ಞ ಅರ್ಪಿಸುವುದು ನನ್ನ ಉದ್ದೇಶವಾಗಿದೆ" ಎಂದು ಅವನು ಹೇಳಬಹುದು.

"ಯಜ್ಞವು ವಿಶಿಷ್ಠ ಉದ್ದೇಶಕ್ಕಾಗಿ ಇರದಿದ್ದರೆ ನಾನು ಅದನ್ನು ಅರ್ಪಿಸಲಿಕ್ಕಾಗುವದಿಲ್ಲ. ನಾನು ಅದನ್ನು ಉಪಕಾರ ಸ್ತುತಿಯ ಯಜ್ಞಾರ್ಪಣೆ ಇಲ್ಲವೇ ಸಮಾಧಾನ ಯಜ್ಞ, ಇಲ್ಲವೇ ಪಾಪಗಳ ಕ್ಷಮಾಪಣೆಗಳಿಗೆ ಅರ್ಪಿಸಬಹುದು, ಆದರೆ ದೇವರಿಗೆ ವಿಧೇಯರಾಗಲು ಅದನ್ನು ಅರ್ಪಿಸಲಾರನು" ಎಂದು ಯಾಜಕನು ಹೇಳಿ ಮುಗಿಸಬಹುದು.

ದೇವರಿಗೆ ವಿಧೇಯರಾಗಿರಲು ಕೇವಲ ಯಜ್ಞಕ್ಕಿಂತ ಹೆಚ್ಚಾದದ್ದನ್ನು ಒಳಗೊಂಡಿರುವುದು ಯಾಕಂದರೆ ವಿಧೇಯತೆಯೂ ಸಹ ಸರಿಯಾದ ಉದ್ದೇಶಗಳ ಮೇಲೆ ಅವಲಂಭಿಸಿದ ಕಾರ್ಯವನ್ನು ಕೇಳುತ್ತದೆ.

ವಿವಿಧ ಉದ್ದೇಶಗಳಿಗಾಗಿ ಇಂದು ಬಾಪ್ತಿಸ್ಮವು ಕೊಡಲ್ಪಡುತ್ತದೆ (ಉದಾಹರಣೆಯಾಗಿ ಒಂದು ಸಭಾಪಂಗಡದ ಸದಸ್ಯರಾಗಲು ಇಲ್ಲವೇ ಒಬ್ಬನು ರಕ್ಷಿಸಲ್ಪಟ್ಟಿದ್ದೇನೆಂದು ತೋರಿಸಲು). ದೇವರಿಗೆ ವಿಧೇಯರಾಗುವುದು ಬಾಪ್ತಿಸ್ಮ ಹೊಂದುವದಕ್ಕೆ ಒಂದು ಕಾರಣವಾಗಿದ್ದರೂ ದೇವರು ವಾಗ್ದಾನ ಮಾಡಿದ್ದರಲ್ಲಿ ನಂಬಿಕೆಯಿಲ್ಲದ ವಿಧೇಯತೆಯು ದೇವರಿಗೆ ವಿಧೇಯತೆಯಾಗಿರುವದಿಲ್ಲ.

## ಹೇಳಿಕೆ 1: "ಯೇಸುವು ನಮ್ಮ ಉದಾಹರಣೆ"

ನಾವು ಬಾಪ್ತಿಸ್ಮ ಹೊಂದುವದಕ್ಕೆ ನಮ್ಮ ಪ್ರೇರೇಪಣೆಯ ಉದಾಹರಣೆಯು ಯೇಸು

ಎಂದು ಹೇಳಲ್ಪಟ್ಟಿದೆ. "ಯೇಸು ಬಾಪ್ತಿಸ್ಮ ಹೊಂದಿದಂತೆ ಬಾಪ್ತಿಸ್ಮ ಹೊಂದಲು ನಿರೀಕ್ಷಿಸಲ್ಪಟ್ಟಿದ್ದೇವೆ."[4] ಅನೇಕ ವಿಧಾನಗಳಲ್ಲಿ ಯೇಸುವು ನಮ್ಮ ಉದಾಹರಣೆಯಾಗಿದ್ದಾನೆ. ಆದರೆ ಮಾನಸಾಂತರದ ಅವಶ್ಯಕತೆಯಿರುವ ಪಾಪಗಳ ಕ್ಷಮಾಪಣೆಯ ವಿಷಯವಾಗಿ ಅವರು ನಮ್ಮ ಉದಾಹರಣೆಯಾಗಲಾರರು (ಅಪೊಸ್ತಲರ ಕೃತ್ಯ 3:19). ಯಾಕಂದರೆ ಮಾಸಾಂತರಪಡುವದಕ್ಕಾಗಿ ಇಲ್ಲವೇ ಕ್ಷಮಾಪಣೆ ಹೊಂದುವದಕ್ಕಾಗಿ ಆತನಲ್ಲಿ ಪಾಪಗಳಿರಲಿಲ್ಲ.

ದೇವರಿಗೆ ವಿಧೇಯನಾಗಲು ಯೇಸು ಬಾಪ್ತಿಸ್ಮ ಹೊಂದಿದನು, ಆದರೆ ಪಾಪಗಳ ಕ್ಷಮಾಪಣೆಗಾಗಿ ಆತನು ಬಾಪ್ತಿಸ್ಮ ಹೊಂದಲಿಲ್ಲ. ಯೋಹಾನನ ಬಾಪ್ತಿಸ್ಮಕ್ಕಾಗಿ ಬಂದವರು ದೇವರಿಗೆ ವಿಧೇಯರಾಗಲು ಬಂದರು. ಬರಲಿಕ್ಕೆ ಇದು ಒಳ್ಳೇ ಕಾರಣವಾಗಿತ್ತು, ಆದರೆ ಬರಲು ಅದೊಂದೇ ಉದ್ದೇಶವಾಗಿರಲಿಲ್ಲ. ಅವರು ತಮ್ಮ ಪಾಪಗಳನ್ನು ಅರಿಕೆ ಮಾಡುತ್ತ (ಮತ್ತಾಯ 3:6) ಹಾಗೂ ಯೋಹಾನನಿಂದ ಸಾರಲ್ಪಟ್ಟ ಕ್ಷಮಾಪಣೆಯನ್ನು ಹುಡುಕುತ್ತ (ಲೂಕ 3:3) ಬಂದರು.

ಯೇಸುವು ಈ ಉದ್ದೇಶಕ್ಕಾಗಿ ಈ ಬಾಪ್ತಿಸ್ಮಕ್ಕೆ ಬರುವ ಅವಶ್ಯಕತೆಯಿರಲಿಲ್ಲ ಎಂಬ ಸಂಗತಿಯು ಇತರ ಎಲ್ಲರೂ ಬರುವ ಅವಶ್ಯಕತೆಯನ್ನು ತೆಗೆದು ಹಾಕುವದಿಲ್ಲ. ಆ ಉದ್ದೇಶಕ್ಕಾಗಿ ನಾವು ಬರುವ ಅವಶ್ಯಕತೆಯನ್ನು ತೆಗೆದು ಹಾಕುವದಿಲ್ಲ. ನಮ್ಮ ಕೈಗಳು ಕೊಳೆಯಾಗಿವೆ ಮತ್ತು ಅವುಗಳನ್ನು ಸ್ವಚ್ಛಗೊಳಿಸಲು ಬರುತ್ತೇವೆ ಎಂದು ತಿಳಿದುಕೊಳ್ಳುವ ಜನರಂತೆ ನಾವಿರಬೇಕು. ಯೇಸುವಿನ ಬಳಿಗೆ ಬಂದು ಆತನ ಚಿತ್ತಕ್ಕೆ ಒಪ್ಪಿಕೊಳ್ಳುವದಕ್ಕೆ ನಮ್ಮ ಉದ್ದೇಶವು ಆತನ ರಕ್ತದ ಮುಖಾಂತರ ಶುದ್ಧೀಕರಿಸುವದನ್ನು ಹುಡುಕುವುದಾಗಿದೆ. ನಮ್ಮನ್ನು ನಾವೇ ತೊಳೆದು ಕೊಳ್ಳದಿರುವ ಸಂಗತಿಯು ಈ ಶುದ್ಧೀಕರಣವನ್ನು ಸ್ವೀಕರಿಸುವ ಉದ್ದೇಶಕ್ಕಾಗಿ ಬಾಪ್ತಿಸ್ಮದ ಮುಖಾಂತರ ಯೇಸುವಿನ ಬಳಿಗೆ ನಾವು ಬರಲಾರೆವು ಎಂದರ್ಥವಾಗುವದಿಲ್ಲ. ಉದ್ದೇಶಕ್ಕೆ ನಾವು ವಿಧೇಯರಾಗಲಾರೆವು ಆದರೆ ಯೇಸುವಿನ ರಕ್ತದಿಂದ ಶುದ್ಧೀಕರಿಸಲ್ಪಡುವ ಉದ್ದೇಶಕ್ಕಾಗಿ ನಾವು ಬರಬಹುದು. ಈ ಉದ್ದೇಶಕ್ಕಾಗಿ ನಾವು ಬರುವಾಗ ಮತ್ತು ಆತನು ನಮ್ಮ ಪಾಪಗಳನ್ನು ಕ್ಷಮಿಸುವದರ ನಮ್ಮ ನಂಬಿಕೆಯ ಮೇಲೆ ಅವಲಂಭಿಸುವಾಗ ದೇವರು ನಮ್ಮ ನಂಬಿಕೆಯನ್ನು ನೋಡುವನು. ಬೇರೆ ಉದ್ದೇಶಕ್ಕಾಗಿ ಬಾಪ್ತಿಸ್ಮಕ್ಕೆ ಬರುವ ವ್ಯಕ್ತಿಯು ತಾನು ಬಾಪ್ತಿಸ್ಮ ಹೊಂದುವಾಗ ಯೇಸುವಿನ ರಕ್ತದ ಮೂಲಕ ತನ್ನನ್ನು ಕ್ಷಮಿಸುವ ದೇವರ ವಾಗ್ದಾನ ದಲ್ಲಿ ನಂಬಿಕೆಯೊಂದಿಗೆ ಉತ್ತರ ಕೊಡುತ್ತಿರುವುದಿಲ್ಲ.

Rubel Shelly ಅವರ ಅನಂತರದ ಹೇಳಿಕೆಗಳು ವ್ಯತಿರಿಕ್ತವಾದವುಗಳಂತೆ ತೋರಿಸಿದರೂ ಅವರು ಸರಿಯಾಗಿ ಗಮನಿಸಿದ್ದಾರೆ: "ಮುಖ್ಯವಾದ ಸಂಗತಿಯ ವೈಯಕ್ತಿಕ ವಿಶ್ವಾಸದೊಂದಿಗೆ ಸಂಬಂಧಿಸಿದೆ. ಒಬ್ಬನು ಏನನ್ನು ಅರ್ಥ ಮಾಡಿಕೊಳ್ಳುವನು? ಆ ವಿಷಯದಲ್ಲಿ ಒಬ್ಬನ ಉದ್ದೇಶವೇನು?"[5]

ಯೇಸುವು ತಾನು ಎಲ್ಲಾ ನೀತಿಯನ್ನು ಪೂರೈಸಲು ಬಾಪ್ತಿಸ್ಮಕ್ಕೆ ಬಂದಿದ್ದೇನೆಂದು ಹೇಳಿದನು. ಇದರ ಅರ್ಥ ಆತನು ತನ್ನ ಬಾಪ್ತಿಸ್ಮದ ಉದ್ದೇಶದ ಬಗ್ಗೆ ಅಜ್ಞಾನಿಯಾಗಿದ್ದನೆಂದಾಗುವದಿಲ್ಲ. ಯೇಸುವನ್ನು ಅನುಸರಿಸುವದರಲ್ಲಿ ಬಾಪ್ತಿಸ್ಮಕ್ಕೆ ನಮಗಾಗಿ ಅದಕ್ಕಿರುವ ಅರ್ಥವನ್ನು ತಿಳಿದುಕೊಂಡು ಬರಬೇಕು. ಅದರ ಅರ್ಥ ನಮ್ಮ ಪಾಪಗಳ ಕ್ಷಮಾಪಣೆ ಹೊಂದುವದಕ್ಕಾಗಿ ನಾವು ಬಾಪ್ತಿಸ್ಮಕ್ಕೆ ಬರಬೇಕು ಎಂಬುದು.

## ಹೇಳಿಕೆ 2: “ಪರಿಶುದ್ಧಾತ್ಮನೆಂಬ ವರ ಮತ್ತು ಪಾಪಕ್ಷಮಾಪಣೆಯು ಒಂದೇ ಕ್ರಮದಲ್ಲಿವೆ”

ಶುದ್ಧ ಮಾಡುವವದನ್ನು ಬಾಪ್ತಿಸ್ಮದ ಉದ್ದೇಶದಂತೆ ತಿಳಿದು ಕೊಳ್ಳುವ ಅಗತ್ಯತೆಯನ್ನು ಕೆಲವರು ಆಕ್ಷೇಪಿಸಿದ್ದಾರೆ:

> “ಪರಿಶುದ್ಧಾತ್ಮ ಎಂಬ ವರವು” ಒಂದು ವಾಗ್ದಾನವಾಗಿ ಹೇಳಲ್ಪಟ್ಟಿದ್ದರೂ ಅದು ನಿವಾರಣೆಯೊಂದಿಗೆ ಸಮನಾದ ಕ್ರಮದಲ್ಲಿ ಹೊಂದಿಕೊಳ್ಳುತ್ತದೆ. ಯಾಕಂದರೆ ಅವೆರಡೂ ಮಾನಸಾಂತರ ಪಡುವವನಿಗೆ ಮತ್ತು ಬಾಪ್ತಿಸ್ಮ ಹೊಂದುವವನಿಗೆ ದೇವರಿಂದ ಕೊಡಲ್ಪಡುವ ಆಶೀರ್ವಾದಗಳಾಗಿವೆ. “ಪಾಪ ಪರಿಹಾರವಾಗಲೀ” ಇಲ್ಲವೇ “ಪರಿಶುದ್ಧಾತ್ಮ ಎಂಬ ವರವಾಗಲೀ” ಬಾಪ್ತಿಸ್ಮದ ಆಜ್ಞೆಯ ಭಾಗವಾಗಿರುವದಿಲ್ಲ.[6]

“ಮಾನಸಾಂತರಪಡಿರಿ ಹಾಗೂ ಬಾಪ್ತಿಸ್ಮ ಹೊಂದಿರಿ ಮತ್ತು ಪಾಪಗಳ ಕ್ಷಮಾಪಣೆಯನ್ನೂ ಪರಿಶುದ್ಧಾತ್ಮನನ್ನೂ ಸ್ವೀಕರಿಸುವಿರಿ” ಎಂದು ಅಪೊಸ್ತಲರ ಕೃತ್ಯ 2:38 ಹೇಳುವದಿಲ್ಲ. ಇಲ್ಲವೇ “ಮಾನಸಾಂತರಪಡಿರಿ ಹಾಗೂ ಪಾಪಗಳ ಕ್ಷಮಾಪಣೆಗಾಗಿ ಮತ್ತು ಪರಿಶುದ್ಧಾತ್ಮನಿಗಾಗಿ ಬಾಪ್ತಿಸ್ಮ ಹೊಂದಿರಿ” ಎಂದೂ ಹೇಳುವುದಿಲ್ಲ. ಆದರೆ “ಮಾನಸಾಂತರಪಟ್ಟು ಮತ್ತು ನಿಮ್ಮ ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮ ಹೊಂದಿರಿ; ಮತ್ತು ನೀವು ಪರಿಶುದ್ಧಾತ್ಮ ಎಂಬ ವರವನ್ನು ಹೊಂದುವಿರಿ” ಎಂದು ಅದು ಹೇಳುತ್ತದೆ. ಪಾಪಗಳ ಕ್ಷಮಾಪಣೆ ಮತ್ತು ಪರಿಶುದ್ಧಾತ್ಮನ ವರವು *eis* ಎಂಬ ಗ್ರೀಕ್ ಪದಕ್ಕೆ ಸಮನಾಗಿ ಸಂಬಂಧಿಸಿರುವುದಿಲ್ಲ. “For” (*eis*) ಎಂಬುದು ಪಾಪಗಳ ಕ್ಷಮಾಪಣೆಗೆ ಮಾತ್ರ ಸಂಬಂಧಿಸಿದೆ (“ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮ ಹೊಂದಿರಿ”), ಆದರೆ ಪರಿಶುದ್ಧಾತ್ಮ ಎಂಬ ವರಕ್ಕೆ ಸಂಬಂಧಿಸಿರುವದಿಲ್ಲ (“ಪರಿಶುದ್ಧಾತ್ಮನಿಗಾಗಿ ಬಾಪ್ತಿಸ್ಮ ಹೊಂದಿರಿ), ಬಾಪ್ತಿಸ್ಮವು ಪಾಪಗಳ ಪರಿಹಾರಕ್ಕಾಗಿರುವುದು, ಆದರೆ ಪಾಪಗಳ ಕ್ಷಮಾಪಣೆಗಾಗಿಯೂ ಪರಿಶುದ್ಧಾತ್ಮ ಎಂಬ ವರಕ್ಕಾಗಿಯೂ ಇರುವದಿಲ್ಲ. ಪಾಪಗಳ ಕ್ಷಮಾಪಣೆಗಾಗಿ ಯೇಸುವಿನ ಹೆಸರಿನಲ್ಲಿ ಬಾಪ್ತಿಸ್ಮ ಹೊಂದುವುದು ಪರಿಶುದ್ಧಾತ್ಮನೆಂಬ ವರವನ್ನು ಹೊಂದುವದಕ್ಕೆ ಶರತ್ತಾಗಿರುತ್ತದೆ.

ವಿವಿಧ ಭಾಷಾಂತರಗಳು ಈ ಭಿನ್ನತೆಯನ್ನು ತೋರಿಸುತ್ತವೆ:

> ಮಾನಸಾಂತರಪಟ್ಟು ಮತ್ತು ಬಾಪ್ತಿಸ್ಮ ಹೊಂದಿರಿ … ಪಾಪಗಳ ಕ್ಷಮಾಪಣೆಗಾಗಿ. ಹಾಗೂ ನೀವು ಪರಿಶುದ್ಧಾತ್ಮ ಎಂಬ ವರವನ್ನು ಹೊಂದಿಕೊಳ್ಳುವಿರಿ (NIV, Green, *A Liberal Translation*).

> ಮಾನಸಾಂತರಪಟ್ಟು … ಹಾಗೂ ಪಾಪಗಳ ಕ್ಷಮಾಪಣೆಗಾಗಿ … ಬಾಪ್ತಿಸ್ಮ ಹೊಂದಿರಿ, ಹಾಗೂ ನೀವು ಪರಿಶುದ್ಧಾತ್ಮನೆಂಬ ವರವನ್ನು ಹೊಂದಿಕೊಳ್ಳುವಿರಿ (NASB, RSV, NRSV).

ಈ ಎಲ್ಲಾ ಭಾಷಾಂತರಗಳು ಪಾಪಗಳ ಕ್ಷಮಾಪಣೆಯ ನಂತರ ಅವಧಿಯನ್ನು ಇಲ್ಲವೇ ಅರ್ಥ ವಿರಾಮವನ್ನು ಇಡುವದರಿಂದ ಪರಿಶುದ್ಧಾತ್ಮನ ಸ್ವೀಕಾರವು ಮಾನಸಾಂತರಪಟ್ಟು ಪಾಪಗಳ ಕ್ಷಮಾಪಣೆಗಾಗಿ ಯೇಸು ಕ್ರಿಸ್ತನ ಹೆಸರಿನಲ್ಲಿ ಬಾಪ್ತಿಸ್ಮ ಹೊಂದುವವರಿಗೆ

ಕೊಡಲ್ಪಟ್ಟ ಆಶೀರ್ವಾದವಾಗಿದೆ ಯೆಂಬುದನ್ನು ತೋರಿಸುತ್ತದೆ. ಹೀಗೆ ಒಬ್ಬನು ಪರಿಶುದ್ಧಾತ್ಮನನ್ನು ಸ್ವೀಕರಿಸಲು ಬಾಪ್ತಿಸ್ಮ ಹೊಂದುವದಿಲ್ಲ. ಆದರೆ ಅದರ ಬದಲು ಪಾಪಗಳ ಕ್ಷಮಾಪಣೆಯನ್ನು ಸ್ವೀಕರಿಸಲು ಬಾಪ್ತಿಸ್ಮ ಹೊಂದುವರು. ಅದರ ನಂತರ ಪರಿಶುದ್ಧಾತ್ಮನೆಂಬ ವರವು ಕೊಡಲ್ಪಡುವುದು.

ಬಾಪ್ತಿಸ್ಮವು ನೂತನ ಜನನವನ್ನು ತರುವದನ್ನು ಒಳಗೊಂಡಿರುವುದು, ಪರಿಶುದ್ಧಾತ್ಮ ಎಂಬ ವರವು ಹೊಸದಾಗಿ ಹುಟ್ಟಿದವರಿಗೆ ಜನನವಾದನಂತರ ವರವಾಗಿದೆ (ಗಲಾತ್ಯ 4:6). ಒಬ್ಬನು ಹೊಸದಾಗಿ ಹುಟ್ಟಲು ಬಾಪ್ತಿಸ್ಮ ಹೊಂದಿದ್ದಾನೆ ಹಾಗೂ ಅವನು ಹೊಸದಾಗಿ ಹುಟ್ಟಿದ್ದರಿಂದ ಅವನಿಗೆ ಪರಿಶುದ್ಧಾತ್ಮನು ವರವಾಗಿ ಕೊಡಲ್ಪಟ್ಟಿದ್ದಾನೆ. ಬಾಪ್ತಿಸ್ಮ ಮತ್ತು ಪರಿಶುದ್ಧಾತ್ಮನೆಂಬ ವರವು ಪಾಪಗಳ ಕ್ಷಮಾಪಣೆಗೆ ಹಾಗೂ ನೂತನ ಜನನಕ್ಕೆ ಸಮನಾಗಿ ಸಂಬಂಧಿಸಿಲ್ಲ. ಹೊಸದಾಗಿ ಹುಟ್ಟುವುದು ಬರಿದಾದ ಧಾರ್ಮಿಕ ಆಚರಣೆಯ ಕಾರ್ಯದಿಂದ ಬರುವದಿಲ್ಲ. ಆದರೆ ಶುದ್ಧೀಕರಿಸಲ್ಪಡಲು ಮತ್ತು ಬಾಪ್ತಿಸ್ಮ ಹೊಂದುವಾಗ ನೂತನ ಜೀವವನ್ನು ಹುಡುಕುವ ಪ್ರಯತ್ನ ಮಾಡುವದರಿಂದ ಬರುತ್ತದೆ.

## ಹೇಳಿಕೆ 3: "ಬಾಪ್ತಿಸ್ಮವು ಒಳಗೊಂಡಿರುವ ಪ್ರತಿಯೊಂದನ್ನೂ ಒಬ್ಬನು ತಿಳಿದು ಕೊಳ್ಳುವ ಅಗತ್ಯತೆಯಿಲ್ಲ"

ಬಾಪ್ತಿಸ್ಮವು ಕೆಳಗಿನವುಗಳೊಳಗೆ *eis* ಇಲ್ಲವೇ ಕೆಳಗಿನವುಗಳಲ್ಲಿ ("into") ಇದೆಯೆಂದು ಕೆಲವರು ತೋರಿಸಿದ್ದಾರೆ:

(1) ತಂದೆ, ಕುಮಾರ, ಪರಿಶುದ್ಧಾತ್ಮನ ಹೆಸರಿನಲ್ಲಿ (ಮತ್ತಾಯ 28:19).
(2) ಪಾಪಗಳ ಪರಿಹಾರ (ಅಪೊಸ್ತಲರ ಕೃತ್ಯ 2:38; ಮಾರ್ಕ 1:4; ಲೂಕ 3:3; ಮತ್ತಾಯ 26:28).
(3) ಕರ್ತನಾದ ಯೇಸುವಿನ ಹೆಸರಿನಲ್ಲಿ (ಅಪೊಸ್ತಲರ ಕೃತ್ಯ 19:5).
(4) ಕ್ರಿಸ್ತನಲ್ಲಿ (ರೋಮಾಪುರ 6:3).
(5) ಕ್ರಿಸ್ತನ ಮರಣದಲ್ಲಿ (ರೋಮಾಪುರ 6:3).
(6) ಕ್ರಿಸ್ತನ ದೇಹದೊಳಗೆ, ಸಭೆಯೊಳಗೆ (1 ಕೊರಿಂಥ 12:13).

ಅಪೊಸ್ತಲರ ಕೃತ್ಯ 2:38ರಲ್ಲಿ ಪೇತ್ರನು ಯಾರಿಗೆ ಪ್ರಸಂಗಿಸುತ್ತಿದ್ದನೋ ಅವರು ಪಾಪಗಳ ಕ್ಷಮಾಪಣೆಯನ್ನು ತಿಳಿದುಕೊಳ್ಳ ಬೇಕಾಗಿದ್ದರೆ ಅವರು ಬಾಪ್ತಿಸ್ಮವು ಯಾವುದರಲ್ಲಿ (*eis* - into) ಎಂದು ಹೇಳಲ್ಪಟ್ಟಿದೆಯೋ ಅದರ ಪ್ರತಿಯೊಂದನ್ನೂ ತಿಳಿದು ಕೊಳ್ಳ ಬೇಕಾಗಿತ್ತು.[7]

ಇದರೊಂದಿಗಿನ ಸಮಸ್ಯೆಯು ಮತ್ತಾಯ 28:19, ಅಪೊಸ್ತಲರ ಕೃತ್ಯ 19:5, ರೋಮಾಪುರ 6:3 ಹಾಗೂ 1 ಕೊರಿಂಥ 12:13 ರಲ್ಲಿ ಉಪಯೋಗಿಸಿದ ಗ್ರೀಕ್ ಮಾತುಗಳು ಅಪೊಸ್ತಲರ ಕೃತ್ಯ 2:38ರಲ್ಲಿಯ ಮಾತಿಗಿಂತ ಭಿನ್ನವಾಗಿರುವಂತದ್ದು. ಅಪೊಸ್ತಲರ ಕೃತ್ಯ 2:38; ಮಾರ್ಕ 1:4; ಲೂಕ 3:3 ಹಾಗೂ ಮತ್ತಾಯ 26:28ರಲ್ಲಿಯ "*eis*" ಪದಕ್ಕೆ ಒತ್ತಡವನ್ನು ಈ ರೀತಿಯಲ್ಲಿ ಯೋಚಿಸಬೇಕೆಂದು Oepke ಹೇಳುತ್ತಾರೆ: "*eis* ಎಂಬುದರ ಅಂತಿಮ ಒತ್ತಡವು ಸಂಬಂಧಿಸಿದ ಉಪಸರ್ಗಾವ್ಯಯ ವಾಕ್ಯಸರಣಿಯು ಸ್ವತಂತ್ರವಾದ ಕ್ರಿಯಾ ವಿಶೇಷಣ ನಿರೂಪಣೆಯಾಗುವಷ್ಟರ ಮಟ್ಟಕ್ಕೆ ಬೆಳೆಯುತ್ತದೆ."[8] ಬಾಪ್ತಿಸ್ಮದೊಂದಿಗೆ "*eis*"ದ ಇತರ ಉಪಯೋಗಗಳು "ಸ್ವತಂತ್ರವಾದ ಕ್ರಿಯಾ ವಿಶೇಷಣ ಗಳ ನಿರೂಪಣೆಯು" "ಸಂಬಂಧಿಸಿದ ಉಪಸರ್ಗಾವ್ಯಯದರ" ವಿವರಣೆಗಳಾಗಿರು ವದಿಲ್ಲ; ಆದುದರಿಂದ ಅವು ಅಪೊಸ್ತಲರ ಕೃತ್ಯ 2:38 ಇಲ್ಲವೇ ಮಾರ್ಕ 1:4ರೊಂದಿಗೆ

ಸಮಾಂತರವಾಗಿರುವದಿಲ್ಲ.

ಬಾಪ್ತಿಸ್ಮ ಹೊಂದುವದಕ್ಕೆ ನಮ್ಮ ಉದ್ದೇಶಗಳನ್ನು ದೇವರು ಬಲ್ಲವನಾಗಿದ್ದಾನೆ; ಈ ತಳಹದಿಯ ಮೇಲೆ ಆತನು ಪರಿಶುದ್ಧಾತ್ಮನನ್ನು ವರವಾಗಿ ಕೊಡುತ್ತಾನೆ. ನಮ್ಮ ಪಾಪಗಳು ಕ್ಷಮಿಸಲ್ಪಡುವದಕ್ಕಾಗಿ ತಮ್ಮ ಯಜ್ಞಗಳನ್ನು ಧರ್ಮಶಾಸ್ತ್ರಕ್ಕನುಗುಣವಾಗಿ ತಂದವರಂತೆ, ನಾವು ನಮ್ಮ ಪಾಪಗಳು ತೊಳೆಯಲ್ಪಡುವ ಉದ್ದೇಶಕ್ಕಾಗಿ ಬಾಪ್ತಿಸ್ಮಕ್ಕೆ ಬರಬೇಕು. ಇತರ ಉದ್ದೇಶಕ್ಕಾಗಿ ಬರುವವರು ಬಾಪ್ತಿಸ್ಮದೊಂದಿಗೆ ದೇವರು ಸಂಬಂಧಿಸುವ ಅರ್ಥವನ್ನು ಕಳೆದುಕೊಳ್ಳುತ್ತಾರೆ.

## ಹೇಳಿಕೆ 4: "ಅಬ್ರಹಾಮನ ಪ್ರಯಾಣವು ಒಂದು ಉದಾಹರಣೆಯಾಗಿದೆ"

ಬಾಪ್ತಿಸ್ಮ ಹೊಂದುವದಕ್ಕಾಗಿ ಉದ್ದೇಶವನ್ನು ಒಬ್ಬನು ತಿಳಿಯಬೇಕಾದ ಅವಶ್ಯಕತೆಯಿಲ್ಲ ಎಂಬುದಕ್ಕೆ ಉದಾಹರಣೆಯಾಗಿ ಅಬ್ರಹಾಮನ ವಿವರಣೆಯಿದೆಯೆಂದು ಕೆಲವರು ಹೇಳುತ್ತಾರೆ.

> ದೇವರಿಗೆ ವಿಧೇಯನಾಗಲು ಅಬ್ರಹಾಮನು ತನ್ನ ಮನೆಯನ್ನು ಬಿಟ್ಟು, ತಾನು ಹೋಗಬೇಕಾದ ಸ್ಥಳವು ಯಾವುದೆಂದು ತಿಳಿಯದೆ ಹೊರಟನು (ಇಬ್ರಿಯ 11:8). ದೇವರು ತನ್ನನ್ನು ಎಲ್ಲಿಗೆ ನಡಿಸುತ್ತಿರುವನೆಂಬುದನ್ನು ಅವನು ತಿಳಿದಿದ್ದರೆ, ಅವನು ಹೆಚ್ಚು ವಿಧೇಯನಾಗುತ್ತಿದ್ದನೋ?[9]

ಒಬ್ಬನು ತಾನು ಬಾಪ್ತಿಸ್ಮ ಹೊಂದುವದರ ಉದ್ದೇಶವನ್ನು ತಿಳಿಯುವ ಅಗತ್ಯತೆಯಿಲ್ಲ ಎಂಬುದನ್ನು ಸಿದ್ಧಪಡಿಸಿ ತೋರಿಸಲು ಅಬ್ರಹಾಮನ ಪ್ರಯಾಣವನ್ನು ಉಪಯೋಗಿಸುವದರಲ್ಲಿ ಎರಡು ಸಮಸ್ಯೆಗಳು ಹುಟ್ಟುತ್ತವೆ. ಮೊದಲನೆಯದು, ಅಬ್ರಹಾಮನಿಗೆ ದೇವರ ಹೇಳಿಕೆಯು ಅವನು ತನ್ನ ಸ್ವಂತ ಊರನ್ನು ಬಿಟ್ಟು ತಾನು ಅವನಿಗೆ ತೋರಿಸುವ ಸ್ಥಳಕ್ಕೆ ಹೋಗಬೇಕೆಂಬ ಆಜ್ಞೆಯನ್ನು ಮಾತ್ರವೇ ಒಳಗೊಂಡಿರಲಿಲ್ಲ. ಅವನು ಹಾಗೆ ಮಾಡಿದರೆ ಅವನನ್ನು ದೊಡ್ಡ ಜನಾಂಗವನ್ನಾಗಿ ಮಾಡುವೆನೆಂದೂ ಅವನ ಮೂಲಕ ಭೂಲೋಕದ ಎಲ್ಲಾ ಜನಾಂಗದವರನ್ನೂ ಆಶೀರ್ವದಿಸುವೆನೆಂದೂ ದೇವರು ಅವನಿಗೆ ಹೇಳಿದನು (ಆದಿಕಾಂಡ 12:1-3). ಎರಡನೆಯದು, ಅಬ್ರಹಾಮನು ತಾನು ಎಲ್ಲಿಗೆ ಹೋಗುವನೆಂದು ತಿಳಿಯದೆ ತನ್ನ ಸ್ವದೇಶವನ್ನು ಬಿಟ್ಟು ಹೊರಟನು. ಆದರೆ ಅವನು ಎಲ್ಲಿಗೆ ಹೋಗಬೇಕೆಂಬುದನ್ನು ದೇವರು ತೋರಿಸುವನೆಂಬ ವಾಗ್ದಾನವಿಲ್ಲದೇ ಹೊರಟು ಹೋಗಲಿಲ್ಲ (ಆದಿಕಾಂಡ 12:1).

ಬಾಪ್ತಿಸ್ಮದಲ್ಲಿ ಇದಕ್ಕೆ ಸಮಾನವಾದದ್ದು ಅನೇಕ ಸಮಯಗಳಲ್ಲಿ ಸಂಭವಿಸಿತು. ಒಬ್ಬ ವ್ಯಕ್ತಿ ಪಾಪಗಳ ಕ್ಷಮಾಪಣೆಗಾಗಿ ನೀರಿನಲ್ಲಿ ಬಾಪ್ತಿಸ್ಮ ಹೊಂದಲು ತೀರ್ಮಾನಿಸಿ, ತಾನು ಎಲ್ಲಿ ಬಾಪ್ತಿಸ್ಮವನ್ನು ಹೊಂದುವೆನೆಂಬುದನ್ನು ತಿಳಿಯದೇ ಹೋದನು. ರಕ್ಷಣೆಗಾಗಿ ಅಗತ್ಯವಾಗಿರುವ ನಂಬಿಕೆಯು ವಾಗ್ದತ್ತ ಆಶೀರ್ವಾದದಲ್ಲಿದೆ (ಒಬ್ಬನು ನೀರನ್ನು ಎಲ್ಲಿ ಕಂಡು ಕೊಳ್ಳುವನೋ ಅದರಲ್ಲಿ ಇಲ್ಲ). ಇದು ಅಬ್ರಹಾಮನ ನಂಬಿಕೆಯೊಂದಿಗೂ ಸಹ ಸತ್ಯವಾಗಿತ್ತು; ಅವನ ವಿಶ್ವಾಸವು ದೇವರ ವಾಗ್ದತ್ತ ಆಶೀರ್ವಾದದಲ್ಲಿತ್ತು. ಆದರೆ ದೇವರು ತನ್ನ ವಾಗ್ದಾನಗಳನ್ನು ಎಲ್ಲಿ ನೆರವೇರಿಸುವನು ಎಂಬುದರಲ್ಲಿ ಅಲ್ಲ.

ಅಬ್ರಹಾಮನು ತಾನು ಎಲ್ಲಿಗೆ ಹೋಗುತ್ತಿದ್ದೇನೆಂಬುದನ್ನು ಅರ್ಥಮಾಡಿಕೊಳ್ಳಲಿಲ್ಲ.

ಯಾಕಂದರೆ ಅವನು ಎಲ್ಲಿಗೆ ಹೋಗಲಿಕ್ಕಿದ್ದನು ಎಂಬುದನ್ನು ದೇವರು ಅವನಿಗೆ ಇನ್ನೂ ಪ್ರಕಟಮಾಡಿರಲಿಲ್ಲ. ಆದರೆ ಅವನು ಹೋದರೆ ತಾನು ಏನು ಮಾಡುವೆನು ಎಂಬುದನ್ನು ಮಾತ್ರ ಹೇಳಿದನು. ಇದರಲ್ಲಿ ಅವನು ತನ್ನ ವಿಶ್ವಾಸವನ್ನು ಇಟ್ಟನು. ನಾವು ಬಾಪ್ತಿಸ್ಮ ಹೊಂದಿದರೆ ತಾನು ಏನು ಮಾಡುವನೆಂದು ದೇವರು ಪ್ರಕಟಿಸಿದ್ದಾನೆ. ಇದರ ಅರ್ಥ ಆತನು ಏನು ಮಾಡುವನು ಎಂಬುದನ್ನು ನಾವು ಅರ್ಥಮಾಡಿಕೊಳ್ಳಬಹುದು. ಹಾಗೂ ಇದರಲ್ಲಿ ನಾವು ನಮ್ಮ ವಿಶ್ವಾಸವನ್ನು ಇಡಬೇಕು.

## ಹೇಳಿಕೆ 5: "ಇಸ್ರಾಯೇಲ್ಯರು ಯೆರಿಕೋವಿನಲ್ಲಿ ತಮ್ಮ ಕಾರ್ಯಕ್ಕಾಗಿ ಕಾರಣವನ್ನು ಅರ್ಥ ಮಾಡಿಕೊಳ್ಳ ಬೇಕಾಗಿರಲಿಲ್ಲ"

ಯೆರಿಕೋವಿನ ಕೋಟೆಗೋಡೆಗಳ ಸುತ್ತ ಇಸ್ರಯೇಲ್ಯರು ಸುತ್ತಿದ್ದರ ಬಗ್ಗೆ ಈ ಪ್ರಶ್ನೆಯು ಕೇಳಲ್ಪಟ್ಟಿದೆ, "ಅವರು (ಇಸ್ರಯೇಲ್ಯರು) ಸುತ್ತುವುದಕ್ಕಾಗಿ ಕಾರಣವನ್ನು ಅರ್ಥಮಾಡಿಕೊಂಡಿರದಿದ್ದರೆ, ಅವರು ಹೇಗೆ ಸುತ್ತುತ್ತಿದ್ದರು, ದೇವರು ಗೋಡೆಗಳನ್ನು ನಿಂತಿರುವಂತೆ ಬಿಡುತ್ತುದ್ದನೋ?"[10] ದೇವರು ಅವರಿಗೆ ಸ್ಪಷ್ಟವಾದ, ಸಾಕಷ್ಟಾದ, ಮತ್ತು ಸಂಪೂರ್ಣವಾದ ಆದೇಶಗಳನ್ನು ಕೊಟ್ಟಿದ್ದನು. ತಾನು ಆಜ್ಞಾಪಿಸಿದ್ದನ್ನು ಅವರು ಮಾಡಿದರೆ ತಾನು ಏನು ಮಾಡುವೆನೆಂದು ಸ್ಪಷ್ಟವಾಗಿ ಅವರಿಗೆ ಹೇಳಿದ್ದನು (ಯೆಹೋಶುವ 6). ಅವರು ಅರ್ಥಮಾಡಿಕೊಂಡರು. ಆದುದರಿಂದ ಆತನು ವಾಗ್ದಾನ ಮಾಡಿದ್ದನ್ನು ಮಾಡಲಿಕ್ಕೆ ದೇವರಲ್ಲಿ ನಂಬಿಕೆಯೊಂದಿಗೆ ಸುತ್ತಿದರು. ಈ ನಂಬಿಕೆಯ ತಳಹದಿಯ ಮೇಲೆ ದೇವರು ಗೋಡೆಗಳನ್ನು ಕೆಡವಿದರು (ಇಬ್ರಿಯ 11:30).

ಅವರ ವಿಶ್ವಾಸವು ಯಾವುದರಲ್ಲಿತ್ತು? ಅವರ ಸುತ್ತು ಹಾಕುವಿಕೆಯಲ್ಲಿಯೋ? ಅವರು ಘೋಷಣೆ ಮಾಡಿದ್ದರಲ್ಲಿಯೋ? ಅವರು ಟಗರಿನ ಕೊಂಬುಗಳನ್ನು ಊದಿದ್ದರಲ್ಲಿಯೋ? ದೇವರು ಗೋಡೆಗಳನ್ನು ಕೆಡವಿ ಹಾಕುವನೆಂಬುದರಲ್ಲಿಯ ವಿಶ್ವಾಸವು ಸುತ್ತು ಹಾಕಲು ಪ್ರೇರೇಪಿಸಿದ ವಿಶ್ವಾಸವಾಗಿತ್ತು. ಅವರ ನಂಬಿಕೆಯ ಕಾರಣದಿಂದ ದೇವರು ಗೋಡೆಗಳನ್ನು ಕೆಡವಿದ ಸಂಗತಿಯ ಅರ್ಥ, ಗೋಡೆಗಳನ್ನು ಕೆಡವಿ ಹಾಕಲು ಆತನಲ್ಲಿ ಅವರಿಗೆ ವಿಶ್ವಾಸವಿಲ್ಲದಿದ್ದರೆ, ಅವರು ಸುತ್ತು ಹಾಕಿದ್ದರೂ ಟಗರಿನ ಕೊಂಬುಗಳನ್ನು ಊದಿದ್ದರೂ ಆತನು ಗೋಡೆಗಳನ್ನು ಕೆಡವುತ್ತಿರಲಿಲ್ಲ ವೆಂದಾಗಿರುವುದು.

ದೇವರ ವಾಗ್ದಾನವು ಗೋಡೆಗಳನ್ನು ಕೆಡವಿ ಹಾಕುವುದಾಗಿತ್ತು. ಅವರ ಭಾಗವು, ತನ್ನ ಭಾಗವನ್ನು ಮಾಡಲು ದೇವರಲ್ಲಿ ನಂಬಿಕೆಯೊಂದಿಗೆ ಸುತ್ತು ಹಾಕುವುದು, ಘೋಷಿಸುವುದು, ಟಗರಿನ ಕೊಂಬು ಊದುವುದು. ದೇವರ ಕೆಲಸವನ್ನು ಅವರು ಅರ್ಥ ಮಾಡಿಕೊಂಡಿರದಿದ್ದರೆ, ದೇವರು ತನ್ನ ಪರವಾಗಿ ತನ್ನ ಕಾರ್ಯವನ್ನು ಮಾಡುವನೆಂಬ ವಿಶ್ವಾಸದಲ್ಲಿ ಅವರು ಕಾರ್ಯ ಮಾಡುತ್ತಿರಲಿಲ್ಲ.

ನಮ್ಮ ವಿಷಯದಲ್ಲಿ, ದೇವರ ಭಾಗವು ನಮ್ಮ ಪಾಪಗಳನ್ನು ಕ್ಷಮಿಸುವುದು. ನಮ್ಮ ಕಾರ್ಯವು ಆತನು ತನ್ನ ಕೆಲಸವನ್ನು ಮಾಡುವರೆಂದು ದೇವರಲ್ಲಿಯ ನಂಬಿಕೆಯೊಂದಿಗೆ ಬಾಪ್ತಿಸ್ಮ ಹೊಂದುವುದು. ದೇವರ ಕಾರ್ಯವನ್ನು ನಾವು ಅರ್ಥಮಾಡಿಕೊಳ್ಳದಿದ್ದರೆ, ಆಗ ತನ್ನ ಭಾಗವನ್ನು ಮಾಡುವ ದೇವರಲ್ಲಿ ನಂಬಿಕೆಯೊಂದಿಗೆ ನಾವು ಕಾರ್ಯ ಮಾಡಲಾರೆವು.

ಸಾಕಷ್ಟು ತಿಳಿವಳಿಕೆಯಿಲ್ಲದಿರುವ ವಿಶ್ವಾಸವನ್ನು ತಡೆಗಟ್ಟುವುದು ಎಂಬುದನ್ನು ತಿಳಿದಿರುವಷ್ಟು ಸೈತಾನನು ಜಾಣನಾಗಿದ್ದಾನೆ ಆದುದರಿಂದ ರಕ್ಷಣೆಯನ್ನು ತಡೆಗಟ್ಟುತ್ತಾನೆ. "ಯಾವನಾದರು ಪರಲೋಕ ರಾಜ್ಯದ ವಾಕ್ಯವನ್ನು ಕೇಳಿ ತಿಳುಕೊಳ್ಳದೆ ಇರುವಲ್ಲಿ

ಸೈತಾನನು ಬಂದು ಆ ಮನುಷ್ಯನ ಮನಸ್ಸಿನಲ್ಲಿ ಬಿತ್ತಿದ್ದನ್ನು ತೆಗೆದು ಹಾಕುತ್ತಾನೆ" (ಮತ್ತಾಯ 13:19), "ಅವರು ನಂಬಿ ರಕ್ಷಣೆ ಹೊಂದಬಾರದೆಂದು ... ತೆಗೆದು ಬಿಡುತ್ತಾನೆ" (ಲೂಕ 8:12). ತಿಳುವಳಿಕೆಯು ವಿಶ್ವಾಸದ ತಳಹದಿಯಾಗಿದೆ (ರೋಮಾಪುರ 10:17) ಮತ್ತು ನಂಬಿಕೆಯು ದೇವರಿಗೆ ಸ್ವೀಕಾರ ಯೋಗ್ಯವಾದ ಕಾರ್ಯದ ತಳಹದಿಯಾಗಿದೆ (ಇಬ್ರಿಯ 11:6). ಆದುದರಿಂದ ರಕ್ಷಣೆಗಾಗಿ ತಿಳುವಳಿಕೆಯು ಅವಶ್ಯವಾಗಿದೆ (ಮತ್ತಾಯ 13:15). ಪಾಪಗಳ ಕ್ಷಮಾಪಣೆಗಾಗಿ ಯಾವುದು ಅಗತ್ಯವಾಗಿದೆಯೆಂದು ತಿಳಿಯದ ವ್ಯಕ್ತಿಯು ಪಾಪಗಳ ಕ್ಷಮಾಪಣೆಗಾಗಿ ಅವಶ್ಯವಾಗಿರುವದನ್ನು ಅವನು ಮಾಡಿದಾಗ್ಯೂ, ನಂಬಿಕೆಯಿಂದ ಅವನು ಕಾರ್ಯಮಾಡಲಾರನು; ಅವನು ತಾನು ಮಾಡುತ್ತಿರುವುದು ಹಾಗೂ ವಾಗ್ದತ್ತ ಆಶೀರ್ವಾದದ ಮಧ್ಯದಲ್ಲಿಯ ಸಂಬಂಧವನ್ನು ಅರಿತುಕೊಳ್ಳಲಾರನು, ಅಂತದ್ದು ವಿಶ್ವಾಸದ ಕಾರ್ಯವಾಗಿರದೇ ಕುರುಡು ವಿಧೇಯತೆಯ ಕಾರ್ಯವಾಗಿರುವುದು. ರಕ್ಷಿಸುವಂಥದ್ದು ವಿಧೇಯತೆಯ ಕಾರ್ಯ ಮಾತ್ರವೇ ಆಗಿರುವದಿಲ್ಲ. ಆದರೆ ಯೇಸುವಿನ ಶುದ್ಧೀಕರಿಸುವ ರಕ್ತದಲ್ಲಿಯ ನಂಬಿಕೆಯ ಮೇಲೆ ಅವಲಂಭಿಸಿದ ವಿಧೇಯತೆಯ ಕಾರ್ಯವಾಗಿದೆ.

## ಹೇಳಿಕೆ 6: "ಒಬ್ಬನು ಎಲ್ಲಾ ಆಶೀರ್ವಾದಗಳಿಗಾಗಿ ಬಾಪ್ತಿಸ್ಮ ಹೊಂದುವನು"

ಬಾಪ್ತಿಸ್ಮ ಹೊಂದಿದವರಿಗೆ ಲಭ್ಯವಿರುವ ಅನೇಕ ಆಶೀರ್ವಾದಗಳನ್ನು ಪಟ್ಟಿಮಾಡಿದ ತರುವಾಯ ಒಮ್ಮೆ ಆಲ್ಲೆನ್ ಹೀಗೆ ಅಭಿಪ್ರಾಯ ಪಟ್ಟಿದ್ದಾರೆ:

> ಪಾಪಗಳ ಪರಿಹಾರವನ್ನು, ಕರ್ತನಿಂದ ಕೊಡಲ್ಪಟ್ಟ ಆಶೀರ್ವಾದವನ್ನು ತನ್ನ ಮುಳುಗೇಳಿಸುವಿಕೆಯಲ್ಲಿ ಒಬ್ಬ ವ್ಯಕ್ತಿಯು ಅರ್ಥಮಾಡಿಕೊಳ್ಳದಿದ್ದರೆ ಅವನು ಪುನಃ ಮುಳುಗೇಳಿಸಲ್ಪಡ ಬೇಕು ಎಂದು ಒಬ್ಬನು ತರ್ಕಬದ್ಧವಾಗಿ ವಾದಿಸಿದರೆ, ದೇವರಿಂದ ನೆರವೇರಿಸಲ್ಪಟ್ಟ, ತಾನು ಕಲಿತ ಇನ್ನೊಂದು ಕಾರಣವನ್ನು ತಿಳಿದುಕೊಳ್ಳದಿದ್ದರೆ, ಅವನಿಗೆ ಇನ್ನೊಂದು ಬಾಪ್ತಿಸ್ಮದ ಅವಶ್ಯಕತೆಯಿರುವುದು ಎಂದು ಹೇಳಬಹುದು.[11]

ಒಂದು ನಿಶ್ಚಿತ ಉದ್ದೇಶಕ್ಕಾಗಿ ನಾವು ಕಾರ್ಯಮಾಡುವಾಗ ಇತರ ಅನೇಕ ಆಶೀರ್ವಾದಗಳಿಗೆ ನಾವು ಬಾಗಿಲು ತೆರೆಯ ಬಹುದು. ಈ ಆಶೀರ್ವಾದಗಳು ಆ ಕಾರ್ಯದ ಉದ್ದೇಶಗಳಾಗಿಲ್ಲದ ಕಾರ್ಯಗಳ ಪರಿಣಾಮವಾಗಿರ ಬಹುದು.

ಒಬ್ಬನು ಮದುವೆಯ ಲೈಸನ್ಸ ಕೊಂಡುಕೊಂಡು. ದೇವಾಲಯದಲ್ಲಿ ಬಂದು ಮದುವೆಯಾಗುವ ಉದ್ದೇಶದಿಂದ "ನಾನು ಒಪ್ಪಿಕೊಳ್ಳುತ್ತೇನೆ" ಎಂದು ಹೇಳಬಹುದು. ಮದುವೆಯಾಗುವದಕ್ಕಾಗಿ ಅವರು ಮಾಡುವ ಈ ಸಂಗತಿಗಳ ಉದ್ದೇಶವು ಮದುವೆಯೊಂದಿಗೆ ಸಂಬಂಧಿಸಿ ಅನೇಕ ಆಶೀರ್ವಾದಗಳು ಲಭ್ಯವಿರುವುದು. ಅದೇ ರೀತಿಯಲ್ಲಿ ಪಾಪಿಯು ದೇವರೊಂದಿಗೆ ತನ್ನ ಸಂಬಂಧವನ್ನು ಸರಿಪಡಿಸಿಕೊಳ್ಳಲು ಇನ್ನು ಮುಂದೆ ದೇವರಿಂದ ದೂರವಾಗಿರದಂತೆ ತನ್ನ ಪಾಪಗಳು ಕ್ಷಮಿಸಲ್ಪಡಲಿಕ್ಕಾಗುವಂತೆ ಬಾಪ್ತಿಸ್ಮ ಮಾಡಿಸಿಕೊಳ್ಳಬೇಕು. ಈ ರೀತಿಯಲ್ಲಿ ಉತ್ತರ ಕೊಡುವುದು ಕ್ರಿಸ್ತನಲ್ಲಿರುವ ಅನೇಕ ಆತ್ಮೀಕ ಆಶೀರ್ವಾದಗಳಿಗೆ ಬಾಗಿಲನ್ನು ತೆರೆಯುವುದು (ಎಫೆಸ 1:3).

ಬಾಪ್ತಿಸ್ಮ ಹೊಂದಿದವನು ನೂತನ ಸಂಬಂಧದೊಂದಿಗೆ ಸಂಬಂಧಿಸಿದ ಎಲ್ಲಾ ಆಶೀರ್ವಾದಗಳನ್ನು ತಿಳಿದುಕೊಳ್ಳಲು ಅವಶ್ಯಕತೆಯಿರುವದಿಲ್ಲ. ಮದುವೆಯಾಗಲಿಕ್ಕಿರುವ ಮನುಷ್ಯನಂತೆ ಬಾಪ್ತಿಸ್ಮ ಹೊಂದುವವನು ಆ ಸಂಬಂಧದಲ್ಲಿ ಪ್ರವೇಶಿಸಲಿಕ್ಕೆ ಅಗತ್ಯವಾ

ದದ್ದನ್ನು ಮಾತ್ರವೇ ತಿಳಿದುಕೊಳ್ಳಬೇಕು ಮತ್ತು ಆ ಉದ್ದೇಶಕ್ಕಾಗಿ ಕಾರ್ಯಮಾಡಬೇಕು. ಇದನ್ನು ಮಾಡುವದರಿಂದ ಬಾಪ್ತಿಸ್ಮದ ಎಲ್ಲಾ ಆಶೀರ್ವಾದಗಳು, ತಿಳಿದು ಕೊಳ್ಳಲ್ಪಟ್ಟಿರ ಬಹುದು ಇಲ್ಲವೇ ತಿಳಿದುಕೊಳ್ಳದೇ ಇರಬಹುದು, ಅವು ಅವನಿಗೆ ಲಭ್ಯವಿರುವವು. ಅವನು ಪ್ರತಿದಿನ ಹೊಸ ಆಶೀರ್ವಾದಗಳ ಬಗ್ಗೆ ಕಲಿತುಕೊಂಡರೆ, ಒಬ್ಬ ಮನುಷ್ಯನು ಪ್ರತೀ ದಿನವೂ ಆಶೀರ್ವಾದವನ್ನು ಹೊಂದಲು ಪುನಃ ಬಾಪ್ತಿಸ್ಮ ಹೊಂದಬೇಕೆಂದು ಅರ್ಥವಾಗುವದಿಲ್ಲ. ಬಾಪ್ತಿಸ್ಮ ಹೊಂದಲು ಅಗತ್ಯವಾಗಿರುವದನ್ನು ಮಾಡುವುದು ಇಲ್ಲವೇ ಮದುವೆ ಯಾಗುವುದು ಆಗಲೇ ಹೊಸ ಸಂಬಂಧದ ಎಲ್ಲಾ ಆಶೀರ್ವಾದ ಗಳು ಲಭ್ಯವಿರುವಂತೆ ಮಾಡಿರುವುದು.

Cecil May, Jr., ಸರಿಯಾಗಿ ಗಮನಿಸಿದ್ದಾರೆ,

> "ಪರಿಶುದ್ಧಾತ್ಮ ಎಂಬ ವರವನ್ನು ಹೊಂದಿಕೊಳ್ಳಬೇಕು" ಎಂಬುದುಕ್ಕಿಂಥ "ಪಾಪಗಳ ಪರಿಹಾರಕ್ಕಾಗಿ" ಎಂಬುದನ್ನು ಹೆಚ್ಚಾಗಿ ಅರ್ಥ ಮಾಡಿಕೊಳ್ಳಬೇಕು ಎಂಬುದು ಪ್ರಶ್ನೆಯಲ್ಲ. "ಆಗಲೇ ಪಾಪಗಳು ತೆಗೆದು ಹಾಕಲ್ಪಟ್ಟಿರುವವೆಂಬುದಕ್ಕಿಂತ" ಹೆಚ್ಚಾಗಿ "ಪಾಪ ಕ್ಷಮಾಪಣೆಗಾಗಿ" ಎಂದು ಅರ್ಥ ಮಾಡಿಕೊಳ್ಳುವುದಾಗಿದೆ, "ನಾನು ಕ್ರಿಸ್ತನಲ್ಲಿರುವದರಿಂದ" ಎಂಬುದಕ್ಕಿಂತ ಹೆಚ್ಚಾಗಿ "ಕ್ರಿಸ್ತನೊಳಗೆ" ಎಂಬುದಾಗಿ; ... ರಕ್ಷಣೆಯು ಆಗಲೇ ಸಂಭವಿಸಿದೆ ಎಂದು ನಂಬಿ ಒಬ್ಬನು ಬಾಪ್ತಿಸ್ಮವನ್ನು ಹೊಂದುವುದು ಬಾಪ್ತಿಸ್ಮಕ್ಕಾಗಿರುವ ಬೈಬಲಿನ ಪ್ರತಿಯೊಂದು ಉದ್ದೇಶವನ್ನು ರದ್ದುಪಡಿಸುತ್ತದೆ.[12]

## ಹೇಳಿಕೆ 7: "ಬಾಪ್ತಿಸ್ಮಕ್ಕಾಗಿರುವ ಒಂದು ಉದ್ದೇಶವು ಇತರ ಎಲ್ಲವನ್ನೂ ಒಳಗೊಂಡಿರುತ್ತದೆ"

ಬಾಪ್ತಿಸ್ಮ ಹೊಂದುವದಕ್ಕೆ ಒಂದು ಉದ್ದೇಶವು, ದೇವರಿಗೆ ವಿಧೇಯವಾಗುವುದು, ಇತರ ಎಲ್ಲಾ ಉದ್ದೇಶಗಳನ್ನು ಒಳಗೊಂಡಿರುವುದು ಎಂದು ಹೇಳಲಾಗಿದೆ:

> ಬಾಪ್ತಿಸ್ಮ ಹೊಂದುವದಕ್ಕಾಗಿ ಒಬ್ಬನು ಎಲ್ಲಾ ಕಾರಣಗಳನ್ನು ಇಲ್ಲವೇ ಇತರ ಎಲ್ಲವುಗಳನ್ನೂ ಒಳಗೊಂಡಿರುವ ಒಂದು ಕಾರಣವನ್ನು ಅರ್ಥ ಮಾಡಿಕೊಳ್ಳ ತಕ್ಕದೆಂದು ತೋರುತ್ತದೆ. ... ಇತರ ಎಲ್ಲಾ ಕಾರಣಗಳನ್ನು ಒಳಗೊಂಡಿರುವ ಒಂದು ಕಾರಣವು ದೇವರಿಗೆ ವಿಧೇಯತೆ ಎಂದು ನಾನು ನಂಬುತ್ತೇನೆ. ಯೇಸುವು ತಂದೆಗೆ ವಿಧೇಯನಾಗಲು ಬಾಪ್ತಿಸ್ಮ ಹೊಂದಿದನು (ಮತ್ತಾಯ 3:15-17) ಹಾಗೂ ಆತನಿಗಿಂತ ಬಾಪ್ತಿಸ್ಮ ಹೊಂದಲು ಹೆಚ್ಚಿನ ಪ್ರೇರಣೆ ಯಾರಿಗೂ ಇರಲಿಕ್ಕಿಲ್ಲ.[13]

ಯೇಸುವಿನ ಬಾಪ್ತಿಸ್ಮದೊಂದಿಗೆ ಸಂಬಂಧಿಸಿದ ಉದ್ದೇಶಗಳಲ್ಲಿ ಒಬ್ಬನು ಒಂದನ್ನು ತೆಗೆದುಕೊಂಡು, ತಾನು ಬಾಪ್ತಿಸ್ಮ ಹೊಂದಿದ ಇತರ ಉದ್ದೇಶಗಳನ್ನು ಕಡೆಗಣಿಸಿ, ನಾವು ಬಾಪ್ತಿಸ್ಮ ಹೊಂದಬೇಕಾದ ಉದ್ದೇಶಗಳನ್ನು ಕಡೆಗಣಿಸಿ, ಈ ಒಂದು ಉದ್ದೇಶವು ನಾವು ಹೊಂದಬೇಕಾದ ಬಾಪ್ತಿಸ್ಮಕ್ಕಾಗಿ ಒಂದೇ ಉದ್ದೇಶವಾಗಿದೆ ಎಂದು ತೀರ್ಮಾನಿಸಲು ಒಬ್ಬ ವ್ಯಕ್ತಿಗೆ ಯಾವ ಹಕ್ಕು ಇದೆ?

ದೇವರಿಗೆ ವಿಧೇಯನಾಗಲು ಯೇಸುವು ಬಾಪ್ತಿಸ್ಮ ಹೊಂದಿದ್ದರಲ್ಲಿ ಪಾಪಗಳ ಕ್ಷಮಾಪಣೆಯೂ ರಕ್ಷಣೆಯೂ ಮತ್ತು ನೂತನ ಜೀವವೂ ಒಳಗೊಂಡಿದ್ದವೋ?

ಇಲ್ಲದಿದ್ದರೆ, ದೇವರಿಗೆ ವಿಧೇಯನಾಗಲು ಬಾಪ್ತಿಸ್ಮವು ಬಾಪ್ತಿಸ್ಮದೊಂದಿಗೆ ಸಂಬಂಧಿಸಿದ ಎಲ್ಲಾ ಉದ್ದೇಶಗಳನ್ನು ಒಳಗೊಂಡಿರುವದಿಲ್ಲ. ನಮ್ಮ ಬಾಪ್ತಿಸ್ಮವು ಯೇಸುವು ಬಾಪ್ತಿಸ್ಮ ಹೊಂದಿದ್ದರ ಕಾರಣವನ್ನು ಒಳಗೊಂಡಿದೆ, ದೇವರಿಗೆ ವಿಧೇಯನಾಗುವುದು, ಆದರೆ ಅದು ಅದನ್ನು ದಾಟಿ ಹೋಗುತ್ತದೆ, ಶಿಲುಬೆಯ ಮೇಲೆ ಯೇಸು ಸುರಿಸಿದ ರಕ್ತದಿಂದ, ಪಾಪಗಳ ಕ್ಷಮಾಪಣೆಯ ಮೂಲಕ ದೇವರೊಂದಿಗೆ ಹೊಸ ಸಂಬಂಧದಲ್ಲಿ ಪ್ರವೇಶಿಸುವ ಉದ್ದೇಶ ವನ್ನು ಒಳಗೊಂಡಿರುತ್ತದೆ. ಬಾಪ್ತಿಸ್ಮವನ್ನು ಇದಕ್ಕಿಂತ ಕಡಿಮೆಯದನ್ನಾಗಿ ಮಾಡುವುದು ಅದನ್ನು ಕುರುಡು ವಿಧೇಯತೆಯ, ಯೇಸುವಿನ ರಕ್ತದಲ್ಲಿ ನಂಬಿಕೆಯಿಲ್ಲದ ಧಾರ್ಮಿಕ ಆಚರಣೆಯನ್ನಾಗಿ ಮಾಡುತ್ತದೆ. ತಿಳುವಳಿಕೆಯಿಲ್ಲದ, ಅರ್ಥವಿಲ್ಲದ ಧರ್ಮಾಚರಣೆಯು ದೇವರೊಂದಿಗೆ ಮನುಷ್ಯನನ್ನು ಸರಿಯಾದ ಸಂಬಂಧದಲ್ಲಿ ತರುವದೆಂದು ಬೈಬಲ್‌ನಲ್ಲಿ ಎಲ್ಲಿಯೂ ಇರುವದಿಲ್ಲ.

## ಮುಕ್ತಾಯ

ಬಾಪ್ತಿಸ್ಮದ ಮೂಲಕವಾಗಿ ಒಬ್ಬನು ಅನೇಕ ಆಶೀರ್ವಾದಗಳ ಬಾಗಿಲು ತೆರೆಯುವ ದೇವರೊಂದಿಗಿನ ಹೊಸ ಸಂಬಂಧದಲ್ಲಿ ಪ್ರವೇಶಿಸುತ್ತಾನೆ. ಬಾಪ್ತಿಸ್ಮವು ದೇವರ ಆಜ್ಞೆಗೆ ಕುರುಡು ಪ್ರತಿಕ್ರಿಯೆಗಿಂತ ಹೆಚ್ಚಿನದಾಗಿದೆ. ಯಾಕಂದರೆ ಅದು ಒಬ್ಬನು ಪಾಪಭರಿತ ಭೂತಕಾಲವನ್ನು, ಯೇಸುವಿನ ಒಡೆತನದಲ್ಲಿ ನಂಬಿಕೆಯನ್ನು ಮತ್ತು ಪಾಪಗಳನ್ನು ಕ್ಷಮಿಸುವ ಶಕ್ತಿಯನ್ನು, ಯೇಸುವಿಗಾಗಿ ಜೀವಿಸುವ ತೀರ್ಮಾನವನ್ನು ದೇವರೊಂದಿಗೆ ಹೊಸ ಸಂಬಂಧಕ್ಕೆ ಪ್ರವೇಶಿಸುವ ಅಪೇಕ್ಷೆಯನ್ನು ಒಳಗೊಂಡಿರುತ್ತದೆ. ಹೃದಯದಲ್ಲಿ ಅಂತ ತಿಳವಳಿಕೆ ಉದ್ದೇಶಗಳೊಂದಿಗೆ ಬಾಪ್ತಿಸ್ಮ ಹೊಂದದೇ ಇದ್ದ ವ್ಯಕ್ತಿಯು ಹೊಸ ಒಡಂಬಡಿಕೆ ಒಂದು ಬಾಪ್ತಿಸ್ಮವನ್ನು ಹೊಂದಿರುವದಿಲ್ಲವೆಂದು ತಿಳಿದು ಕೊಳ್ಳಬೇಕು. ಹಾಗೂ ಈ ಕಾರಣಕ್ಕಾಗಿ ಯೇಸುವಿನಲ್ಲಿ ತನ್ನ ನಂಬಿಕೆಯ ನಿಮಿತ್ತವಾಗಿ ದೇವರೊಂದಿಗಿನ ತನ್ನ ಸಂಬಂಧವನ್ನು ಸರಿಪಡಿಸುವದಕ್ಕೆ ಅಗತ್ಯವಾದ ಬದಲಾವಣೆಗಳನ್ನು ತನ್ನ ಜೀವನದಲ್ಲಿ ಮಾಡಲು ಯೇಸುವಿನಲ್ಲಿ ತನ್ನ ನಂಬಿಕೆಯನ್ನು ಅರಿಕೆಮಾಡಲು ಹಾಗೂ ಯೇಸುವಿನ ರಕ್ತದಿಂದ ತೊಳೆಯಲ್ಪಡಲಿಕ್ಕಾಗುವಂತೆ ಬಾಪ್ತಿಸ್ಮದಲ್ಲಿ ಹಾಗೂ ಯೇಸುವಿನೊಂದಿಗೆ ಹೂಣಲ್ಪಡಲು ಮತ್ತು ಪಾಪಗಳ ಕ್ಷಮಾಪಣೆಯ ಮುಖಾಂತರ ದೇವರೊಂದಿಗೆ ಹೊಸ ಸಂಬಂಧದಲ್ಲಿ ಪ್ರವೇಶಿಸಲು ತೀರ್ಮಾನಿಸಿಕೊಳ್ಳತಕ್ಕದ್ದು.

---

ಟಿಪ್ಪಣಿಗಳು

[1]Cecil May, Jr., "The Nature of Faith, and the 'Rebaptism' Question," Magnolia Bible College *Preacher Talk* 8 (March 1992): 3. [2]Ibid. [3]Jimmy Allen, *Rebaptism?* (West Monroe, La.: Howard Publishing Co., 1991), 41. ಗ್ರಂಥ ಕರ್ತರ ಮೇಲಿನ ಯಾವುದೇ ವಿರೋಧಕ್ಕಾಗಿ ಅಲ್ಲ. ಆದರೆ ಈ ಪುಸ್ತಕದಲ್ಲಿರುವ ಬಹಳವಾದ ವಿವರಣೆಗಳ ನಿಮಿತ್ತವಾಗಿಯೂ, ಅವರೊಂದಿಗೆ ಒಪ್ಪಿಕೊಳ್ಳು ವವರಿಂದ ಹೇರಾಳವಾಗಿ ಉಲ್ಲೇಖಗಳಿರುವದರಿಂದಲೂ ಇದನ್ನು ಆಯ್ದು ಕೊಳ್ಳಲಾಗಿದೆ. [4]Ibid., 46; ಪುಟ 47-48 ಸಹ ನೋಡಿರಿ. [5]Rubel Shelly, *I Just Want to Be a Christian* (Nashville: 20th Century Christian (1986), 124. [6]Allen, 41. [7]Ibid., 117. [8]A. Oepke, "eis," in *Theological Dictionary of the New Testament*, ed. Gerhard Kittel, trans. and ed. Geoffrey W. Bromiley (Grand Rapids, Mich.: Wm. B. Eerdmans Publishing Co., 1964), 2:429. [9]Allen, 42. [10]Ibid., 43.

[11]Ibid., 173. [12]Cecil May, Jr., "The Purpose of Baptism, and the 'Rebaptism' Question," Magnolia Bible College *Preacher Talk* 8 (February 1991): 3. [13]Allen, 173.



© 2009 Truth for Today